ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 1-12
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ತ್ರೀವಾದ: ಪರಿಕಲ್ಪನೆ, ವಿಕಾಸ ಮತ್ತು ಸಾಮಾಜಿಕ ಪ್ರಸ್ತುತತೆ

**ಡಾ. ಸೌಮ್ಯಶ್ರೀ ಎಸ್.ಕೆ**

ಅಥಿತಿ ಉಪನ್ಯಾಸಕರು, ಮಹಿಳಾ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು.

***Abstract:***

*ಸ್ತ್ರೀವಾದ ಎಂಬುದು ಸ್ತ್ರೀ-ಪುರುಷರ ನಡುವೆ ಅಸಮಾನತೆಯನ್ನು ಹೋಗಲಾಡಿಸಿ ಸಮಾಜದಲ್ಲಿ ಸಮಾನತೆಯನ್ನು ತರಲು ಮತ್ತು ಮಹಿಳೆಯರ ವಿಮೋಚನೆಗಾಗಿ ಶ್ರಮಿಸುವ ವಾದವಾಗಿದೆ. ಸ್ತ್ರೀವಾದದಲ್ಲಿ ಹಲವಾರು ಶಾಖೆಗಳಿದ್ದು ಎಲ್ಲಾ ವಿಧದ ಸ್ತ್ರೀವಾದದ ಗುರಿ ಮಹಿಳಾ ವಿಮೋಚನೆಯೇ ಆಗಿದೆ. ಸಾಮಾನ್ಯವಾಗಿ ಸ್ತ್ರೀವಾದವನ್ನು ಪುರುಷ ವಿರೋಧಿ ವಾದ ಎಂದು ತಪ್ಪಾಗಿ ತಿಳಿಯಲಾಗುತ್ತದೆ. ಆದರೆ ಇದು ಪುರುಷ ವಿರೋಧಿ ವಾದವಲ್ಲ ಬದಲಿಗೆ ಹಿಂದಿನಿಂದಲೂ ಮಹಿಳೆಯರ ಮೇಲೆ ಆಗುತ್ತಿರುವ ಶೋಷಣೆ, ದೌರ್ಜನ್ಯ, ದಬ್ಬಾಳಿಕೆ ಮತ್ತು ಅಸಮಾನತೆಯನ್ನು ಪ್ರಶ್ನಿಸುತ್ತಾ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಒದಗಿಸುವುದೇ ಸ್ತ್ರೀವಾದದ ಮುಖ್ಯ ಆಶಯವಾಗಿದೆ.*

***Keywords:*** *ಫೆಮಿನಿಸಂ (ಸ್ತ್ರೀವಾದ), ಸ್ತ್ರಿ ಶೋಷಣೆ, ಸ್ತ್ರೀ ವಿಮೋಚನೆ.*

**ಪೀಠಿಕೆ**

ಸ್ತ್ರೀವಾದ ಎನ್ನುವುದು ಒಂದು ಗಂಭೀರ ಚಿಂತನೆ, ಜೀವನಕ್ರಮ, ಪ್ರಾಮಾಣಿಕ ನಂಬಿಕೆ. ಪ್ರತಿಭಟನಾತ್ಮಕ ಹೋರಾಟದ ತಾತ್ವಿಕತೆ. 'ಫೆಮಿನಿಸಂ' ಎಂಬ ಪದ ಮೊದಲು ಬಳಕೆಯಾದದ್ದು 1872ರಲ್ಲಿ ಫ್ರಾನ್ಸ್‌ನಲ್ಲಿ, ಅನಂತರ 1890ರಲ್ಲಿ ಇಂಗ್ಲೆಂಡಿನಲ್ಲಿ ಬಳಕೆಗೆ ಬಂತು. 1895ರ ವೇಳೆಗೆ ಆಕ್ಸ್‌ಫರ್ಡ್ ಇಂಗ್ಲಿಷ್ ಪದಕೋಶದಲ್ಲಿ ಫೆಮಿನಿಸಂ ಪದ ಮತ್ತು ಅದಕ್ಕೆ ಅರ್ಥ ಸೇರ್ಪಡೆಯಾಯಿತು. 1910ರಲ್ಲಿ ಅಮೆರಿಕಾದಲ್ಲಿ ಈ ಪದ ಪ್ರಯೋಗವಾಯಿತು. ಅನಂತರ ಜಗತ್ತಿನಾದ್ಯಂತ ಪಸರಿಸಿತು. ಆದ್ದರಿಂದ 'ಸ್ತ್ರೀವಾದ' ಎಂಬ ಪರಿಕಲ್ಪನೆ ಪಶ್ಚಿಮದಿಂದ ಆಮದಾದದ್ದು, ಸ್ತ್ರೀವಾದವು ಸ್ತ್ರೀ-ಪುರುಷರ ನಡುವಿನ ಅಸಮಾನತೆಯನ್ನು ಹೋಗಲಾಡಿಸಲು ಮಹಿಳೆಯರಿಗೆ ಸಮಾನತೆಗಾಗಿ ಹಕ್ಕೊತ್ತಾಯಿಸುತ್ತದೆ. ಸ್ತ್ರೀವಾದ ಎಂದರೇನು ಎಂಬುದಕ್ಕೆ ಉತ್ತರ ಬಹಳ ಸಂಕೀರ್ಣವಾದದ್ದು *"ಸಮಾಜದಲ್ಲಿ ಉದ್ಯೋಗದಲ್ಲಿ ಮತ್ತು ಕುಟುಂಬಗಳಲ್ಲಿ ಮಹಿಳೆಯರ ತುಳಿತ ಮತ್ತು ಶೋಷಣೆಯ ಬಗ್ಗೆ ಅರಿವು: ಈ ಪರಿಸ್ಥಿಯನ್ನು ಬದಲಾಯಿಸುವುದಕ್ಕಾಗಿ ಪುರುಷರು ಮತ್ತು ಮಹಿಳೆಯರು ನಡೆಸುವ ಪ್ರಜ್ಞಾಪೂರ್ವಕ ಕ್ರಿಯೆಯೇ ಸ್ತ್ರೀವಾದ"*.

ಸ್ತ್ರೀವಾದದ ಗುರಿಗಳು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಕಂಡಿವೆ. ಸ್ತ್ರೀವಾದದ ಪ್ರಾರಂಭಿಕ ಹಂತಗಳಲ್ಲಿ ಸ್ತ್ರೀವಾದಿಗಳು ಸ್ತ್ರೀಶೋಷಣೆಯನ್ನು ಕೊನೆಗಾಣಿಸುವುದಕ್ಕೆ ಕಾನೂನುರೀತ್ಯಾ ಹಕ್ಕುಗಳನ್ನು ಪಡೆಯುವುದರತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು, ಶಿಕ್ಷಣ, ಉದ್ಯೋಗ, ಆಸ್ತಿಯನ್ನು ಪಡೆಯುವುದು, ಮತ ಚಲಾವಣೆ, ಪ್ರಜಾಸತ್ತಾತ್ಮಕ

***Please cite this article as:*** ಸೌಮ್ಯಶ್ರೀ, ಎಸ್.ಕೆ. (2026). ಸ್ತ್ರೀವಾದ: ಪರಿಕಲ್ಪನೆ, ವಿಕಾಸ ಮತ್ತು ಸಾಮಾಜಿಕ ಪ್ರಸ್ತುತತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 1–12

ಸರ್ಕಾರದಲ್ಲಿ ಭಾಗವಹಿಸುವಿಕೆ, ವಿವಾಹ ವಿಚ್ಛೇದನ, ಸಂತಾನ ನಿಯಂತ್ರಣ ಇವೇ ಮುಂತಾದ ಕ್ಷೇತ್ರಗಳಲ್ಲಿ ಹಕ್ಕುಗಳನ್ನು ಪಡೆಯಲು ಸ್ತ್ರೀವಾದಿಗಳು ಹೋರಾಟವನ್ನು ನಡೆಸಿದ್ದರು. ಇಂದು ಇವುಗಳಲ್ಲಿ ಬಹುತೇಕ ಹಕ್ಕುಗಳು ಸ್ತ್ರೀಯರಿಗೆ ತಾತ್ವಿಕವಾಗಿ ಸಿಕ್ಕಿದ್ದರೂ ಆಚರಣೆಯಲ್ಲಿ ಪೂರ್ಣವಾಗಿ ಸಿಕ್ಕಿಲ್ಲ. ನಿಜವಾದ ಅರ್ಥದಲ್ಲಿ ಸ್ತ್ರೀಪುರುಷ ಸಮಾನತೆಯನ್ನು ಸ್ಥಾಪಿಸುವುದು ಸಾಧ್ಯವಾಗಿಲ್ಲ. ಕಾನೂನಿನ ಮೂಲಕ ಸ್ತ್ರೀವಿರೋಧಿ ಮೌಲ್ಯಗಳೆಲ್ಲವನ್ನೂ ಸಮಾಜದಿಂದ ತೊಡೆದು ಹಾಕಲು ಸಾಧ್ಯವಾಗದಿದ್ದಾಗ ಸ್ತ್ರೀವಾದಿಗಳ ಹೋರಾಟದ ವ್ಯಾಪ್ತಿ ಹೆಚ್ಚಾಯಿತು, ಹೋರಾಟಕ್ಕಾಗಿ ಬಳಸಲ್ಪಟ್ಟ ಅಸ್ತ್ರಗಳ ತೀಕ್ಷ್ಣತೆಯೂ ಹೆಚ್ಚಾಯಿತು. ಸಮಕಾಲೀನ ಸ್ತ್ರೀವಾದ ಸ್ತ್ರೀಗೆ ಸಂಪೂರ್ಣ ಸಮಾನತೆಯನ್ನು ತರುವತ್ತ ತನ್ನ ಗಮನವನ್ನು ಹರಿಸಿದೆ. ಸ್ತ್ರೀ ಸಮಾನತೆಗೆ ಅಡ್ಡಿಯಾಗುವ ಎಲ್ಲ ಪ್ರವೃತ್ತಿಗಳನ್ನು ಎದುರಿಸಿ, ಕಿತ್ತೊಗೆದು ಹಾಕುವ ಗುರಿಯನ್ನು ಸಮಕಾಲೀನ ಸ್ತ್ರೀವಾದ ಹೊಂದಿದೆ. ಈ ಅಡೆತಡೆಗಳು ಸಮಾಜದ ಯಾವುದೇ ಸಂಸ್ಥೆಯಲ್ಲಿ, ಯಾವುದೇ ರೂಪದಲ್ಲಿ ಕಂಡು ಬಂದರೂ ಅದರ ನಿವಾರಣೆ ಸ್ತ್ರೀವಾದದ ಉದ್ದೇಶವಾಗಿದೆ. ಸ್ತ್ರೀವಿರೋಧಿ ಪ್ರವೃತ್ತಿಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆಯನ್ನು ಎದುರಿಸುವುದು ಇಂದಿನ ಸ್ತ್ರೀವಾದದ ಪ್ರಮುಖ ಗುರಿಯಾಗಿದೆ. ಸ್ತ್ರೀವಾದಕ್ಕೆ ತನ್ನದೇ ಆದ ತಾತ್ವಿಕ ತಳಪಾಯವಿದ್ದರೂ ಎಲ್ಲಾ ಕಾಲ್ಲಕ್ಕೂ ಎಲ್ಲಾ ಜನರಿಗೂ ಎಲ್ಲಾ ಪ್ರದೇಶಕ್ಕೂ ಅನ್ವಯವಾಗುವಂತೆ ನಿರ್ದಿಷ್ಟವಾದ ಸಂಕ್ಷಿಪ್ತವಾದ ಪರಿಭಾಷೆ ರೂಪಿಸುವುದು ಕಷ್ಟಸಾಧ್ಯ. ಸ್ತ್ರೀವಾದದ ಪರಿಭಾಷೆ ಬದಲಾಗಬಹುದು, ಬದಲಾಗುತ್ತದೆ. ದಕ್ಷಿಣ ಏಷ್ಯಾ ಸಮ್ಮೇಳನದಲ್ಲಿ ಒಪ್ಪಿಕೊಂಡ ಸ್ತ್ರೀವಾದದ ವ್ಯಾಖ್ಯೆಯನ್ನು ತೆಗೆದುಕೊಂಡರೆ ಅದು "ಸಮಾಜದಲ್ಲಿ, ಉದ್ಯೋಗದಲ್ಲಿ ಹಾಗೂ ಕುಟುಂಬದಲ್ಲಿರುವ ಮಹಿಳೆಯರ ತುಳಿತ ಮತ್ತು ಶೋಷಣೆಯ ಬಗ್ಗೆ ಅರಿವು ಮೂಡಿಸಿ ಅದನ್ನು ಬದಲಾಯಿಸುವುದಕ್ಕೆ ಪುರುಷರು ಮತ್ತು ಮಹಿಳೆಯರು ಸೇರಿ ನಡೆಸುವ ಪ್ರಜ್ಞಾಪೂರಕ ಕ್ರಿಯೆಯೆ ಸ್ತ್ರೀವಾದ" ಎಂದು ಹೇಳುತ್ತದೆ. ಲಿಂಗ ತಾರತಮ್ಯ, ಪುರುಷ ಪ್ರಾಬಲ್ಯ ಮತ್ತು ಪುರುಷ ಪ್ರಧಾನತೆಯನ್ನು ಗುರುತಿಸಿ ಅವುಗಳ ವಿರುದ್ಧ ಕ್ರಮಕೈಗೊಳ್ಳುವ ಯಾರೇ ಆಗಲಿ ಅವರು ಸ್ತ್ರೀವಾದಿಗಳಾಗುತ್ತಾರೆ.

**ವ್ಯಾಖ್ಯೆಗಳು:** ಸ್ತ್ರೀವಾದವನ್ನು ವಿವರಿಸುವ ಅನೇಕ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

"ಪಿತೃಪ್ರಧಾನತೆ ಮತ್ತು ಲಿಂಗತಾರತಮ್ಯಗಳ ವಿರುದ್ಧವಾಗಿ ಸ್ತ್ರೀ ಪುರುಷರ ಸಾಮಾಜಿಕ ಸಮಾನತೆಯ ಪ್ರತಿಪಾದನೆಯೆ ಸ್ತ್ರೀವಾದ ಎಂದು ಜಾನ್.ಜೆ. ಮ್ಯಾಸಿಯೋನಿಸ್ ರವರು ವ್ಯಾಖ್ಯಾನಿಸಿದ್ದಾರೆ. "ಸ್ತ್ರೀವಾದವೆಂಬುದು ಒಂದು ಸಿದ್ಧಾಂತವಾಗಿದ್ದು ಇದು ಆಧುನಿಕ ಸಮಾಜದಲ್ಲಿ ಸ್ತ್ರೀಯರು ಹೇಗೆ ವ್ಯವಸ್ಥಿತವಾಗಿ ಅವಕಾಶ ವಂಚಿತರಾಗಿದ್ದಾರೆಂದು ತಿಳಿಸುವುದಲ್ಲದೆ ಸ್ತ್ರೀ–ಪುರುಷರಿಗೆ ಸಮಾನ ಅವಕಾಶಗಳಿರಬೇಕೆಂದು ಪ್ರತಿಪಾದಿಸುತ್ತದೆ" ಎಂದು ಅಬೆಲ್‌ಕೊಂಬಿ ರವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಾರ್ಬರಾಸ್ಮಿತ ರವರು "ಸ್ತ್ರೀವಾದವೆನ್ನುವುದು ಒಂದು ರಾಜಕೀಯ ಸಿದ್ಧಾಂತವಾಗಿದ್ದು ಇದು ಮಹಿಳೆಯರಿಗೆ ವಿಮೋಚನೆ ತಂದುಕೊಡುವ ಪ್ರಯುತ್ನವಾಗಿದೆ" **ಲಿಂಗ್‌ರವರು** "ಸ್ತ್ರೀ–ಪುರುಷರು ಜೊತೆಯಾಗಿ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಯತ್ನವೇ ಸ್ತ್ರೀವಾದ" ಹಾಗೂ ಬೆಲ್ ಹೂಕ್ಸ್ ರವರು ಸ್ತ್ರೀವಾದವು ಲಿಂಗ, ಜನಾಂಗ, ಜಾತಿ, ವರ್ಗ ಮುಂತಾದ ವಿವಿಧ ಹಂತಗಳಲ್ಲಿ ಪುರುಷ ಪ್ರಾಧಾನ್ಯತೆಯನ್ನು ನಿರ್ಮೂಲನ ಗೊಳಿಸುವುದಾಗಿದೆ" ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

ಸ್ತ್ರೀವಾದ ಎಂಬುದು ಪುರುಷ ದ್ವೇಷದಿಂದ ಹುಟ್ಟಿದ ಸಿದ್ಧಾಂತವಲ್ಲ, ಅದು ಪುರುಷಾಧಿಪತ್ಯದ ವಿರುದ್ಧ ಹೋರಾಡುವ ಸಿದ್ಧಾಂತ. ಸ್ತ್ರೀಪರ ಹಕ್ಕುಗಳು ಮತ್ತು ಸ್ತ್ರೀ ಹಿತಾಸಕ್ತಿಗಳು ಅದರ ಕೇಂದ್ರ

ವಿಷಯವಾಗಿರುತ್ತವೆ. ಸ್ತ್ರೀವಾದವು ಮಹಿಳೆಯ ಸಬಲೀಕರಣ, ಬಿಡುಗಡೆ, ಸಮಾನತೆ, ದಬ್ಬಾಳಿಕೆ ಹಾಗೂ ತಾರತಮ್ಯತೆಯಿಂದ ಮುಕ್ತ ಮುಂತಾದವನ್ನು ಸ್ಪಷ್ಟ ತಾತ್ವಿಕತೆಯ ಆಧಾರದ ಮೇಲೆ ವ್ಯಾಖ್ಯಾನಿಸುತ್ತದೆ. ಲಿಂಗಾಧಾರಿತ ಸಂಬಂಧಗಳ ಕುರಿತು ಅನೇಕ ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳುತ್ತಾ ಉತ್ತರಿಸಿಕೊಳ್ಳುವ ಬೇರೆ ಬೇರೆ ವಿನ್ಯಾಸವನ್ನು ಸ್ತ್ರೀವಾದದ ಭಿನ್ನ ತಾತ್ವಿಕ ನೆಲೆಗಳಾಗಿ ಗುರುತಿಸಿಕೊಳ್ಳುತ್ತೇವೆ. ರಾಷ್ಟ್ರೀಯ, ಪ್ರಾದೇಶಿಕ, ಜನಾಂಗೀಕ, ಸಾಂಸ್ಕೃತಿಕ ಭಿನ್ನತೆಗನುಸಾರವಾಗಿ ರೂಪುಗೊಂಡ ಪ್ರಶ್ನೆ, ಉತ್ತರಗಳು ಸ್ತ್ರೀವಾದದ ಬಹುರೂಪಕ್ಕೆ ಕಾರಣವಾಗಿವೆ. ಈ ವೈವಿಧ್ಯವೇ ಸ್ತ್ರೀವಾದದ ವ್ಯಾಪಕತೆಗೆ ಕಾರಣ.

ವೈಯಕ್ತಿಕ ಬದುಕಿನ ಸ್ತ್ರೀ–ಪುರುಷ ಸಂಘರ್ಷಗಳನ್ನು ಸ್ತ್ರೀವಾದಿ ನೆಲೆಯಿಂದ ಅರ್ಥಮಾಡಿಕೊಂಡಂತೆಲ್ಲ 'ವೈಯಕ್ತಿಕವು ರಾಜಕೀಯವೂ ಹೌದು!' ಎಂಬ ತಿಳುವಳಿಕೆಯು ನಮ್ಮಲ್ಲಿ ಮೂಡುತ್ತದೆ. ಹುಟ್ಟಿನೊಂದಿಗೆಯೇ ಮೌಲ್ಯ ವ್ಯವಸ್ಥೆಯು ಧಾರಾಳವಾಗಿ ನೀಡುವ 'ಅಧಿಕಾರ ಬಲವು' ಗಂಡಸಿನ ದೊಡ್ಡ ತೊಂದರೆ, ಸ್ತ್ರೀವಾದವು, ಪುರುಷನು ಇಂಥ ಅಧಿಕಾರ ಬಲದ ಸಮಸ್ಯೆಯಿಂದ ತನ್ನನ್ನು ಬಿಡಿಸಿಕೊಳ್ಳುವಲ್ಲಿ ನಿಜಕ್ಕೂ ಸಹಾಯಕವಾಗಬಲ್ಲದು. ಜೈವಿಕ ಲಿಂಗದ ಕಾರಣಕ್ಕಾಗಿಯೇ ಅಸಮಾನತಗೆ ಗುರಿಯಾಗುವಲ್ಲಿ ಮಹಿಳೆಯು ಅನುಭವಿಸುವ ನೋವಿನ ಕಾರಣವನ್ನು ಸ್ತ್ರೀವಾದಿಗಳು ಗುರುತಿಸುತ್ತಾರೆ. ಅಧಿಕೃತವಾದ ಸ್ತ್ರೀವಾದ ಕಲ್ಪನೆ ಯಾವುದು ಎಂಬ ಪ್ರಶ್ನೆಗೆ ಖಚಿತ ಉತ್ತರವಿಲ್ಲ. ಕಾಲ, ದೇಶ, ಚಾರಿತ್ರಿಕ ಸಂದರ್ಭಗಳಿಗೆ ಬದ್ಧವಾದ ಅನುಭವಗಳಿಗನುಗುಣವಾಗಿ ಸ್ತ್ರೀವಾದವು ರೂಪುಗೊಳ್ಳುತ್ತದೆ. ಸಿದ್ಧವಾದ ಮಾನದಂಡಗಳನ್ನು ಇಟ್ಟುಕೊಂಡು ಸ್ತ್ರೀವಾದವನ್ನು ಸ್ಥಾಪಿಸುವ ಯತ್ನವು ಅಷ್ಟು ಫಲದಾಯಕವಲ್ಲ. ಮಹಿಳಾ ಚಳುವಳಿಗಳು ಸಂದರ್ಭದಲ್ಲಿ ಏಳುವ ಭಿನ್ನಾಭಿಪ್ರಾಯಗಳು ಹಾಗೂ ಚರ್ಚೆಗಳು, ಭಿನ್ನ ಭಿನ್ನ ಅನುಭವಗಳು, ಸ್ತ್ರೀವಾದದ ಅನೇಕ ನೆಲೆಗಳನ್ನು ಸೂಚಿಸುತ್ತವೆ. ಹೀಗಾಗಿ ಸ್ತ್ರೀವಾದಕ್ಕೆ ಒಂದು ಏಕೀಕೃತ ವಿವರಣೆ ಸಾಧ್ಯವಿಲ್ಲ.

### ಸ್ತ್ರೀವಾದಿ ಶಾಖೆಗಳು (Schools of Feminism)

ಸ್ತ್ರೀವಾದ ಎನ್ನುವುದಕ್ಕೆ ಭದ್ರವಾದ ಒಂದು ಸೈದ್ಧಾಂತಿಕ ಹಿನ್ನೆಲೆಯರುವುದಷ್ಟೇ ಅಲ್ಲ, ಆ ಸಿದ್ಧಾಂತದಲ್ಲಿ ವಿವಿಧ ಪ್ರಕಾರಗಳೂ ಕಂಡು ಬರುತ್ತವೆ. ಎಲ್ಲ ಸ್ತ್ರೀವಾದಿಗಳೂ ಸ್ತ್ರೀಪರ ಕಾಳಜಿಯನ್ನು ಹೊಂದಿದ್ದರೂ ಅವರು ಅಳವಡಿಸಿಕೊಳ್ಳುವ ವಿಧಾನಗಳಲ್ಲಿ ಅವರ ದೃಷ್ಟಿಕೋನಗಳಲ್ಲಿ ಭಿನ್ನತೆ ಕಂಡು ಬರುತ್ತದೆ. ಸ್ತ್ರೀವಾದಿ ನಿಲುವುಗಳಲ್ಲಿ ಪ್ರಮುಖವಾಗಿ ಏಳು ರೀತಿಗಳನ್ನು ಗುರುತಿಸಬಹುದು (ಶೋಸ್ ಮೇರಿಟಾಂಗ್, ಫೆಮಿಸಿಸ್ಟ್ ಥಾಟ್–ಎ ಕಾಂಪ್ರಹೆನ್ಸಿವ್ ಇಂಟ್ರೊಡಕ್ಷನ್, ಕಾಟ್‌ಲೆಜ್ಡ್, 1992). ಸ್ತ್ರೀವಾದದ ಈ ಏಳು ಪ್ರಕಾರಗಳನ್ನು ಪ್ರತ್ಯೇಕವಾಗಿ ಈ ಕೆಳಗೆ ವಿಶ್ಲೇಷಿಸಲಾಗಿದೆ.

### 1.ಉದಾರವಾದಿ ಸ್ತ್ರೀವಾದದ (Liberal Feminism)

19 ಮತ್ತು 20ನೇ ಶತಮಾನದ ಅಂಚಿನಲ್ಲಿ ಉದಾರವಾದಿ ಸ್ತ್ರೀವಾದ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. 1960ರ ದಶಕದಲ್ಲಿ ಪಶ್ಚಿಮದ ಮಹಿಳಾ ಚಳುವಳಿಯು ಇದರ ಮುಂದಾಳತ್ವವನ್ನು ವಹಿಸಿಕೊಂಡಿತು. ಯುರೋಪಿನ ಮೇರಿ ವೊಲ್‌ಸ್ಟೋನ್ ಕ್ರಾಫ್ಟ್, ಎಲಿಜಬೆತ್ ಲೇಡಿ ಸ್ಟಾಂಟನ್, ಹ್ಯಾರಿಯಟ್ ಟೇಲರ್ ಮಿಲ್, ಬೆಟ್ಟಿ ಫ್ರೀಡನ್ ಮತ್ತು ಜಾನ್ ಸ್ಟುವರ್ಟ್‌ಮಿಲ್ ಉದಾರವಾದಿ ಸ್ತ್ರೀವಾದದ ಪ್ರತಿಪಾದಕರು. ವೈಚಾರಿಕತೆಯನ್ನು ರೂಢಿಸಿಕೊಂಡ ವ್ಯಕ್ತಿ ಅನನ್ಯನಾಗಲು ಸಾಧ್ಯವಾಗುತ್ತದೆ. ಮನುಷ್ಯರೆಲ್ಲರಿಗೂ ರಾಜಕೀಯ ಸ್ವಾತಂತ್ರ್ಯದ ಹಕ್ಕುಗಳಿದ್ದು ಕಾನೂನಿನ ಕಣ್ಣಿನಲ್ಲಿ, ನ್ಯಾಯದ ಕಣ್ಣಿನಲ್ಲಿ ಎಲ್ಲರೂ ಸಮಾನರು ಎಂದು ಉದಾರವಾದಿ ಸ್ತ್ರೀವಾದ ನಂಬುತ್ತದೆ. ಮೇರಿ ವೊಲ್‌ಸ್ಟನ್‌ಕ್ರಾಫ್ಟ್‌ಳ "ಎ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮೆನ್" (1792) ಮತ್ತು ಜಾನ್

ಸ್ಟುವರ್ಟ್ ಮಿಲ್‌ನ "ದಿ ಸಬ್ಜೆಕ್ಷನ ಆಫ್ ವಿಮೆನ್" (1869) –ಇವೆರಡು ರಚನೆಗಳಲ್ಲೂ ಉದಾರವಾದಿ ಸ್ತ್ರೀವಾದದ ಪ್ರಮುಖ ಛಾಯೆಗಳನ್ನು ಗುರುತಿಸಬಹುದು. ಮತ್ತೊಂದು ಪ್ರಮುಖ ಬರಹವೆಂದರೆ ಹ್ಯಾರಿಯಟ್ ಟೇಲರ್ ಮಿಲ್ಲಳ "ದಿ ಎನ್‌ಫ್ರಾನ್‌ಚೈಸ್ ಮೆಂಟ್ ಆಫ್ ವಿಮೆನ್" (1851).

ವೊಲ್‌ಸ್ಟನಕ್ರಾಫ್ಟ್ 'ವೈಚಾರಿಕತೆ' ಮತ್ತು 'ಸ್ವಯಮಧಿಕಾರ' ಮುಂತಾದ ಗುಣಗಳಿಗೆ ಅತಿಯಾದ ಮಹತ್ವವನ್ನು ನೀಡಿದ್ದು ಭಾವುಕತೆಯಿಂದ ಸ್ತ್ರೀ ದೂರವಿರಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದಳು. ವೈಚಾರಿಕತೆಯ ಆಧಾರದ ಮೇಲೆ ತನ್ನ ಜೀವನವನ್ನು ರೂಪಿಸಿಕೊಂಡ ಸ್ತ್ರೀ ಗುಲಾಮಗಿರಿಯಿಂದ ವಿಮುಕ್ತಿಯನ್ನು ಪಡೆಯಬಹುದೆಂದು ಪ್ರತಿಪಾದಿಸಿದ್ದ ವೊಲ್‌ಸ್ಟನ್ ಕ್ರಾಫ್ಟ್‌ಳಿಗೆ ಸ್ತ್ರೀ ಓರ್ವ ಹೆಂಡತಿ ಹಾಗೂ ತಾಯಿಯಾಗಿಯೂ ತನ್ನ ಪಾತ್ರವನ್ನು ಶ್ರದ್ಧೆಯಿಂದ ನಿರ್ವಹಿಸಬೇಕೆಂಬ ಅಭಿಪ್ರಾಯವೂ ಇದ್ದಿತು. ಕಾಯಿದೆಗಳು ಎಲ್ಲಾ ಸಂದರ್ಭಗಳಲ್ಲೂ ಸ್ತ್ರೀಯರ ಹಿತಾಸಕ್ತಿಗಳನ್ನು ಕಾಪಾಡುವುದರಲ್ಲಿ ಅಸಮರ್ಥವಾಗಿರುತ್ತವೆ ಎಂಬುದನ್ನು ಒಪ್ಪಿದ್ದ ಹ್ಯಾರಿಯಿಟ್ ಟೇಲರ್ ಮಿಲ್ ಮತ್ತು ಜಾನ ಸ್ಟುವರ್ಟ್ ಮಿಲ್, ಸಂಪೂರ್ಣ ವಿಮೋಚನೆಯನ್ನು ಪಡೆಯಲು ಸ್ತ್ರೀ ಮನೆಯ ಹೊರಗಡೆ ದುಡಿಯಬೇಕೆಂದು ಟೇಲರ್ ಅಭಿಪ್ರಾಯಪಟ್ಟರೆ, ಸ್ತ್ರೀಗೆ ದುಡಿಮೆಯಲ್ಲಿ ತೊಡಗುವ ಅಥವಾ ದುಡಿಮೆಯನ್ನು ಬಿಡುವ ನಿರ್ಧಾರವನ್ನು ಅವಳ ಇಚ್ಛೆಗೆ ಅನುಗುಣವಾಗಿ ಮಾಡುವಂತಹ ಸ್ವಾತಂತ್ರ್ಯ ಲಭ್ಯವಾದರೆ ಮಾತ್ರ ಆಕೆ ವಿಮೋಚನೆಯನ್ನು ಪಡೆಯಲು ಸಾಧ್ಯವೆಂದು ಮಿಲ್ ಹೇಳುತ್ತಾರೆ. ಹಲವಾರು ಸಾಂಪ್ರದಾಯಿಕ ಹಾಗೂ ಕಾನೂನು ಸಂಬಂಧಿ ನಿಂಬಂಧನೆಗಳು ಸ್ತ್ರೀಯು ಸಾರ್ವಜನಿಕ ಜೀವನದಲ್ಲಿ ಭಾಗಿಯಾಗಲು ಅಡ್ಡಿಯಾಗಿವೆ ಎಂಬುದು ಇವರ ನಿಲುವು. ಉದಾರವಾದಿ ಸ್ತ್ರೀವಾದಿಗಳ ದೃಷ್ಟಿಯಲ್ಲಿ ಸ್ತ್ರೀ ಪುರುಷ ಸಮಾನತೆ ಸ್ಥಾಪನೆಯಾಗಬೇಕಾದರೆ ಸ್ತ್ರೀಪುರುಷ ಸಮಾನತೆಗೆ ಅಡ್ಡಿ ಬಂದಿರುವ ಕಾಯಿದೆಗಳನ್ನು ಮೊದಲು ಕಿತ್ತೊಗೆಯಬೇಕು. ಅಷ್ಟೇ ಅಲ್ಲದೆ ಸಮಾಜದ ಸಂಪನ್ಮೂಲಗಳ ಅನುಭೋಗ ಹಾಗೂ ವಿತರಣೆಗಳಲ್ಲಿ ಕಂಡುಬರುವ ಅಸಮಾನತೆಯನ್ನೂ ತೊಡೆದು ಹಾಕಬೇಕು. ಪ್ರಗತಿಗೆ ಪೂರಕವಾದ ಅವಕಾಶಗಳ ಲಭ್ಯತೆಯಲ್ಲಿಯೇ ಲಿಂಗಾಧರಿತ ತಾರತಮ್ಯ ಕಂಡು ಬಂದರೆ ಸ್ತ್ರೀ ಪುರುಷ ಸಮಾನತೆ ಹೇಗೆ ತಾನೇ ಸಾಧ್ಯ ಎಂಬ ಪ್ರಶ್ನೆಯನ್ನು ಉದಾರವಾದಿ ಸ್ತ್ರೀವಾದಿಗಳು ಕೇಳುತ್ತಾರೆ.

'ವೈಚಾರಿಕತೆ', 'ಸಮಾನ ಶಿಕ್ಷಣ', 'ಸಮಾನ ಉದ್ಯೋಗವಕಾಶ', 'ಸಮಾನ ಮತದಾನದ ಹಕ್ಕು', 'ವಿವಾಹ ಸಂಬಂಧದಲ್ಲಿ ಸಹಭಾಗಿತ್ವದ ಮಹತ್ವ' ಮುಂತಾದ ಮೌಲ್ಯಗಳನ್ನು ಮಿಲ್ ಟೇಲರ್, ವೊಲ್‌ಸ್ಟನಕ್ರಾಫ್ಟ್ ಮುಂತಾದ ಉದಾರವಾದಿ ಸ್ತ್ರೀವಾದಿ ಚಿಂತಕರು ಪ್ರತಿಪಾದಿಸಿದ್ದರೂ ಅವರ ನಿಲುವುಗಳು ಸುಧಾರಣಾವಾದಿ ಧೋರಣೆಗಳನ್ನು ಹೊಂದಿದ್ದವೇ ಹೊರತು ಕ್ರಾಂತಿಕಾರಿ ಭಾವನೆಗಳನ್ನಲ್ಲ. ಅದೂ ಅಲ್ಲದೆ ಒಂದು ಸಾಂಪ್ರದಾಯಿಕ ಚೌಕಟ್ಟಿನ ಒಳಗೆ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸುವ ಉದಾರವಾದಿ ಸ್ತ್ರೀವಾದಿಗಳ ಅಭಿಪ್ರಾಯಗಳು ಇಂದಿನ ಪರಿಸ್ಥಿತಿಯಲ್ಲಿ ಅಸಂಗತವೆನಿಸುತ್ತವೆ. ಈ ಸ್ತ್ರೀವಾದಿಗಳು ಕಂಡುಕೊಂಡ ಸತ್ಯವೆಂದರೆ 'ಲೈಂಗಿಕ ಸಮಾನತೆ' ಎನ್ನುವುದು ಮಹಿಳೆಯರಿಗೆ ಕೇವಲ ಕಾನೂನು ಕಾಯ್ದೆಯ ಮಟ್ಟದಲ್ಲಿ ಸಮಾನಾವಕಾಶಗಳನ್ನು ಕಲ್ಪಿಸಿಕೊಡುವುದೇ ಹೊರತು ಬದುಕಿನ ಸಂದರ್ಭದಲ್ಲಲ್ಲ, ಸಂವಿಧಾನಾತ್ಮಕ ಮಟ್ಟದಲ್ಲಿ ಸ್ತ್ರೀ ಪುರುಷ ಸಮಾನತೆ ಕಂಡು ಬಂದಿದ್ದರೂ. ಸಾಮಾಜಿಕ ಬದುಕಿನಲ್ಲಿ ಪೂರ್ಣ ಪ್ರಮಾಣದ ಲೈಂಗಿಕ ಸಮಾನತೆಯ ಸ್ಥಾಪನೆ ಸಾಧ್ಯವಾಗಿಲ್ಲ. ಬಹಳ ಮುಖ್ಯವಾದ ಸಂಗತಿಯೆಂದರೆ ಎಲ್ಲಿಯವರೆಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮಾನತೆ, ಅಸ್ತಿತ್ವದಲ್ಲಿರುತ್ತದೆಯೇ ಅಲ್ಲಿಯವರೆಗೆ ಲೈಂಗಿಕ ಸಮಾನತೆ ಸಾಧಿತವಾಗುವುದಿಲ್ಲ.

ಮೊದಲ ಹಂತದ ಸ್ತ್ರೀವಾದಿ ಚಿಂತಕಿಯರು ಉದಾರವಾದೀ ಸ್ತ್ರೀದೋರಣೆಗಳನ್ನು ಪ್ರಕಟಿಸಿದರೆ, ಆಧುನಿಕ ಸ್ತ್ರೀವಾದಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಲೈಂಗಿಕ ಸಮಾನತೆಯನ್ನು ಸಾಧಿಸುವುದು ಮುಖ್ಯವೆಂದು ಪ್ರತಿಪಾದಿಸುತ್ತಾರೆ. ಆದ್ದರಿಂದ ದ್ವಿಲಿಂಗತ್ವದ ಪರಿಕಲ್ಪನೆಯನ್ನು ಬೆಳೆಸಿಕೊಂಡರೆ, ಹೆಣ್ಣು ಗಂಡುಗಳಿಬ್ಬರೂ ಈ ಗುಣಗಳನ್ನು ಗೌರವಿಸಿದರೆ ಹೆಣ್ಣು ಕೀಳು ಗಂಡು ಮೇಲು ಎಂಬ ಪ್ರಜ್ಞೆಗಳನ್ನು ಹೋಗಲಾಡಿಸಲು ಸಹಾಯಕವಾಗುತ್ತದೆ. ಪ್ರತಿಯೊಂದು ಹೆಣ್ಣು ಹಾಗೂ ಗಂಡುಗಳಿಬ್ಬರಲ್ಲೂ ಹೆಣ್ಣಿನ ಹಾಗೂ ಗಂಡಿನ ಗುಣಗಳೆರಡೂ ಇರುತ್ತವೆ. ಬೆಟ್ಟಿ ಫ್ರೀಡನ್ ತನ್ನ 'ಫೆಮಿನೈನ್ ಮಿಸ್ಟಿಕ್' ಕೃತಿಯಲ್ಲಿ ಸಿದ್ದ ಮಾದರಿಗಳು, ಸಿದ್ದ ಪಾತ್ರಗಳು, ಹೆಣ್ಣನ್ನು ಅದೇ ಪಾತ್ರಗಳಲ್ಲಿ ನೋಡುವ ಮೂಲಕ ಅವಳ ವ್ಯಕ್ತಿತ್ವವನ್ನು ಮಿತಗೊಳಿಸುತ್ತದೆ. ಇದು ಹೆಣ್ಣಿಗೆ ಮಾಡುವ ಅನ್ಯಾಯವಷ್ಟೇ ಅಲ್ಲದೆ ಸಮಾಜಕ್ಕೆ ಮಾಡುವ ಅನ್ಯಾಯವೂ ಸಹ ಆಗಿದೆ. ವಿವಾಹ ತಾಯ್ತನದ ಜೊತೆಗೆ ಆಕೆಯ ವ್ಯಕ್ತಿತ್ವ ವಿಕಾಸಕ್ಕೆ ವೃತ್ತಿ ಬದುಕು ಅತಿ ಮುಖ್ಯ ಎನ್ನುತ್ತಾಳೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಸಾಮಾಜಿಕ–ಆರ್ಥಿಕ ತಾರತಮ್ಯ ಎಲ್ಲಿಯವರೆಗೆ ಕೊನೆಯಾಗುವುದಿಲ್ಲವೋ ಅಲ್ಲಿಯವರೆಗೆ ಲಿಂಗಸಮಾನತೆ ಸಾಧಿಸುವುದು ಸಾಧ್ಯವಿಲ್ಲ. ಪುರುಷನ ಪ್ರೀತಿ, ಮಕ್ಕಳ ಪೋಷಣೆ, ಓರ್ವ ಸ್ತ್ರೀಯ ಜೀವನದಲ್ಲಿ ಸಮಾನತೆ ಮತ್ತು ಸ್ವಂತಿಕೆಯಷ್ಟೇ ಮುಖ್ಯವಾದಂಥ ಅಂಶಗಳು 'ವೃತ್ತಿ ಜೀವನ' ಹಾಗೂ 'ಕುಟುಂಬ ಜೀವನ'ಗಳ ನಡುವೆ ಹೊಂದಾಣಿಕೆ ಸಾಧ್ಯ ಎಂಬುದು ಫ್ರೀಡನ್ನಳ ವಿಚಾರ. ಸ್ತ್ರೀ ವಿಮೋಚನೆಯಲ್ಲಿ ಪುರುಷ ಕೇಂದ್ರಿತ ಮೌಲ್ಯಗಳ ಅಳವಡಿಕೆ ಅಥವಾ ಅನುಕರಣೆಗೆ ಉದಾರವಾದಿ ಸ್ತ್ರೀವಾದಿಗಳು ನೀಡಿರುವ ಪ್ರಾಶಸ್ತ್ಯವನ್ನು ಆಲಿಸನ ಜ್ಯಾಗರ್ ಮತ್ತು ಜೀನ್ ಬೆತ್ಕೆ ಎಲ್‌ಶ್ಟೆನ್‌ರ ವರು ಟೀಕಿಸಿದ್ದಾರೆ. ಸಮಾನತೆಯನ್ನು ಪಡೆಯಲು ಸ್ತ್ರೀಯರು ಪುರುಷರಂತಾಗಬೇಕಿಲ್ಲ ಎಂಬುದು ಉದಾರವಾದಿ ಸ್ತ್ರೀವಾದದ ವಿಮರ್ಶಕರ ಅಭಿಪ್ರಾಯ.

### 2.ಮಾರ್ಕ್ಸ್‌ವಾದಿ ಸ್ತ್ರೀವಾದ (Marxist Feminism)

ವರ್ಗ ಅಸಮಾನತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ ಅದರಲ್ಲೂ ವಿಶೇಷವಾಗಿ ಸ್ತ್ರೀಯರು ಸಮಾನತೆಯನ್ನು ಗಳಿಸುವುದು ಸಾಧ್ಯವೇ ಇಲ್ಲ ಎಂಬುದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳ ಅಭಿಪ್ರಾಯ. ಫೆಡ್ರಿಕ್ ಎಂಗೆಲ್ಸ್ ತನ್ನ 'ಆರಿಜಿನ್ ಆಫ್ ದಿ ಫ್ಯಾಮಿಲಿ ಪ್ರೈವೇಟ್ ಪ್ರಾಪರ್ಟಿ ಆಯಿಂಡ್ ಸ್ಟೇಟ್ ಎಂಬ ಮಹಾ ಪ್ರಬಂಧದಲ್ಲಿ ಸ್ತ್ರೀಶೋಷಣೆ ಎನ್ನುವುದು ಆರಂಭವಾದುದೇ ಖಾಸಗಿ ಸಂಪತ್ತಿನ ಗಳಿಕೆಯಿಂದ ಎಂದು ಪ್ರತಿಪಾದಿಸಿದನು. ಮಾರ್ಗರೇಟ್ ಬೆನಸ್ಟನ್, ದಲ್ಲಾಕೋಸ್ತ, ಸೆಲ್ಮ ಜೇಮ್ಸ್, ಹೋಮ್‌ಸ್ಟ್ರಾಮ್ ಮತ್ತು ಬಾರ್ಬರ್ ಬೆರ್ಗ್‌ಮನ್ನ್ ಮಾರ್ಕ್ಸ್‌ವಾದಿ ಸ್ತ್ರೀವಾದದ ಪ್ರಮುಖ ಪ್ರತಿಪಾದಕರು. ಮಾರ್ಕ್ಸ್ ಮತ್ತು ಏಂಗೆಲ್ಸ್‌ರು ಸ್ತ್ರೀಯರ ಅಧೀನ ಸ್ಥಿತಿಗೆ ಅವರು ಆರ್ಥಿಕ ಉತ್ಪಾದನೆಯಿಂದ ದೂರ ಉಳಿದಿರುವುದೇ ಕಾರಣವಾಗಿದೆ ಎಂಬುದನ್ನು ಪ್ರತಿಪಾದಿಸಿದರು. ಮಾರ್ಕ್ಸ್‌ನ ಪ್ರಕಾರ ಹೆಂಗಸಿನ ಮೇಲೆ ಗಂಡಸು ನಡೆಸುವ ದಬ್ಬಾಳಿಕೆಯು ಉತ್ಪಾದನೆಯ ಶೋಷಣಾತ್ಮಕ ಸಂಬಂಧವನ್ನು ಹೊಂದಿದೆ ಎಂಬುದಾಗಿದೆ. ಪುರುಷರು ಉತ್ಪಾದನೆಗೆ ತೊಡಗಿದ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಸಫಲರಾದರು. ಮಾತೃಪ್ರಧಾನ ಸಮಾಜ ಪಿತೃಪ್ರಧಾನವಾಗಿ ಬದಲಾಗಿ ಸ್ತ್ರೀ ಶೋಷಣೆಯ ಅಸ್ತ್ರವಾಯಿತು. 'ಪಿತೃತ್ವ' ಎಂಬ ಒಂದು ಪರಿಕಲ್ಪನೆಗೆ ಅನಗತ್ಯವಾದ ಪ್ರಾಮುಖ್ಯತೆ ನೀಡಲಾಗಿ ಸಮಾಜದಲ್ಲಿ ಸ್ತ್ರೀಯ ಪರಿಸ್ಥಿತಿಯೇ ಬದಲಾಯಿತು. ಇದು ಪಿತೃ ಪ್ರಧಾನ ವ್ಯವಸ್ಥೆಗೆ ದಾರಿ ಮಾಡಿತು. ಮಾರ್ಕ್ಸ್‌ವಾದಿ ಸ್ತ್ರೀವಾದಿ ವಿಶ್ಲೇಷಣೆಯಲ್ಲಿ 'ಕುಟುಂಬ', 'ಮನೆಗೆಲಸ', 'ವಿವಾಹ' ಮುಂತಾದ ಪರಿಕಲ್ಪನೆಗಳು ಪ್ರಮುಖ ಸ್ಥಾನವನ್ನು ಪಡೆದಿವೆ. ವಿವಾಹ ಪದ್ದತಿಗೂ ಸ್ತ್ರೀ ಶೋಷಣೆಗೂ ನಡುವೆ ನಿಕಟವಾದ ಸಂಬಂಧವಿದೆ ಎಂದು ವಾದಿಸಿರುವ

ಏಂಗೆಲ್ಸ್ ಏಕಸಂಗಾತಿ ವಿವಾಹ ಪದ್ಧತಿಯು ಸ್ತ್ರೀಯರನ್ನು ಪುರುಷನ ಖಾಸಗಿ ಆಸ್ತಿಯನ್ನಾಗಿ ಪರಿವರ್ತಿಸಿದ್ದೇ ಆಕೆಯ ಶೋಷಣೆಯ ಪ್ರಮುಖ ಮೂಲವಾಯಿತು ಎಂದಿದ್ದಾನೆ. ಪುರುಷನು ಸ್ತ್ರೀಯ ಲೈಂಗಿಕತೆ ಹಾಗೂ ದುಡಿಮೆಗಳೆರಡನ್ನೂ ತನ್ನ ಅಧೀನದಲ್ಲಿ ಇರಿಸಿಕೊಂಡು ಆಕೆಯನ್ನು ಪರಾವಲಂಬಿಯನ್ನಾಗಿ ಮಾಡಿದ್ದೇ ಅಲ್ಲದೆ, ಗೃಹಬಂಧಿಯನ್ನಾಗಿಯೂ ಮಾಡಿದ ಹಾಗಾಗಿ ಸ್ತ್ರೀ ವಿಮುಕ್ತಿ ಹೊಂದಬೇಕಾದರೆ ಮನೆಯಿಂದ ಹೊರಗೆ ಬಂದು ದುಡಿಮೆಯಲ್ಲಿ ತೊಡಗಬೇಕು ಎಂದು ಏಂಗೆಲ್ಸ್ ಹೇಳುತ್ತಾರೆ. ಸಮಾಜದಲ್ಲಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ನಶಿಸಿ ಸಮಾಜವಾದಿ ತತ್ವವನ್ನು ಆಧರಿಸಿದ ಸಾಮಾಜಿಕ ವ್ಯವಸ್ಥೆ ಜಾರಿಗೆ ಬಂದಾಗ ಮಾತ್ರ ಸ್ತ್ರೀ ಶೋಷಣೆ ಅಂತ್ಯವಾಗಿ ಲಿಂಗಸಮಾನತೆಯು ಸ್ಥಾಪನೆಯಾಗುವುದು. ಸಾಮಾಜಿಕ ಉತ್ಪಾದನಾ ವ್ಯವಸ್ಥೆಯಲ್ಲಿ ಸ್ತ್ರೀಯರು ವ್ಯಾಪಕವಾಗಿ ಭಾಗವಹಿಸಿದಾಗ ಮಾತ್ರ ಅವರ ವಿಮೋಚನೆ ಸಾಧ್ಯ ಎಂಬುದು ಏಂಗೆಲ್ಸ್‌ನ ವೇದಸರಣಿಯ ಸಾರವಾಗಿದೆ.

ಏಂಗಲ್ಸ್ ಬಂಡವಾಳಶಾಹಿಯನ್ನು ಪುರುಷನಿಗೆ ಹೋಲಿಸುತ್ತಾನೆ. ಬಂಡವಾಳಶಾಹಿ ವ್ಯವಸ್ಥೆ ಬಡ, ಅಸಹಾಯಿಕರನ್ನು ಹೇಗೆ ಶೋಷಿಸುತ್ತದೋ ಹಾಗೆ ಪಿತೃಪ್ರಧಾನ ವ್ಯವಸ್ಥೆ ಬಡ ಹಾಗೂ ದುರ್ಬಲರಾದ ಹೆಣ್ಣು ಮಕ್ಕಳನ್ನು ಶೋಷಿಸಲು ಮುಂದಾಗುತ್ತದೆ. ಏಂಗಲ್ಸ್‌ನ ವ್ಯಾಪಕವಾದ ಚಿಂತನೆ ಮಹಿಳೆಯು ಆರ್ಥಿಕ ಚಟುವಟಿಕೆಗಳಲ್ಲಿ ಉತ್ಪಾದನಾ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಅವಳ ವಿಮೋಚನೆ ಸಾಧ್ಯ ಎಂದು ಹೇಳಿದ್ದನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಒಪ್ಪಿಕೊಂಡರೂ ಅವನ ಚಿಂತನೆಯಲ್ಲಿರಬಹುದಾದ ಅನೇಕ ಮಿತಿಗಳನ್ನು ಗುರುತಿಸುತ್ತಾರೆ. ಬಹಳ ಮುಖ್ಯವಾಗಿ ಅವರು ಪ್ರಶ್ನಿಸುವ ವಿಚಾರವೆಂದರೆ ಸ್ತ್ರೀ–ಪುರುಷರ ಶ್ರಮ ವಿಭಜನೆ, ಈ ಶ್ರಮವಿಭಜನೆಯಲ್ಲಿರುವ ತಾರತಮ್ಯಗಳೇ ಪಿತೃಪ್ರಧಾನ ವ್ಯವಸ್ಥೆಗೆ ದಾರಿಮಾಡಿಕೊಟ್ಟಿದೆ ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಸ್ಪಷ್ಟವಾಗಿ ಗುರುತಿಸುತ್ತ ಈ ನೆಲೆಯಿಂದ ಏಂಗಲ್ಸ್‌ನ ವಿಚಾರಧಾರೆಗಿಂತ ಭಿನ್ನರಾಗುತ್ತಾರೆ. ಮನೆಯೊಳಗಿ ಕೆಲಸ, ಮಕ್ಕಳ ಪಾಲನೆ–ಪೋಷಣೆ, ಅತಿಥಿ ಸತ್ಕಾರ, ಹಬ್ಬ ಹರಿದಿನಗಳ ಆಚರಣೆ, ಕೌಟುಂಬಿಕ ಒತ್ತಡಗಳು, ಇವ್ಯಾವು ದುಡಿಮೆ ಎನ್ನಿಸಿಕೊಳ್ಳುವುದಿಲ್ಲ. ಇತ್ತೀಚಿನ ಸಂದರ್ಭದಲ್ಲಿ ಆಧುನಿಕ ಸ್ತ್ರೀವಾದಿಗಳು 'ಹೌಸ್ ವೈಫ್' ಎಂಬ ಪರಿಕಲ್ಪನೆಯನ್ನು ವಿರೋಧಿಸುತ್ತ ಗೃಹಿಣಿಯನ್ನು 'ಹೌಸ್ ಮೇಕರ್' ಎಂದು ಕರೆದಿರುವುದು ಗಮನೀಯ. ಏಂಗಲ್ಸ್, ಶ್ರಮ ವಿಭಜನೆ ಸ್ತ್ರೀ ಪುರುಷರಿಬ್ಬರಿಗೂ ಸಮಾನವಾಗಿರಬೇಕು, ಎಂದು ಭಾವಿಸಿದ. ಸ್ತ್ರೀಯರಿಗೆ ಮಾತ್ರ ಮೀಸಲಾಗಿದ್ದ ಕೆಲಸಗಳನ್ನು ಸಾಮಾಜೀಕರಣಗೊಳಿಸಿದಾಗ, ಸ್ತ್ರೀ–ಪುರುಷರಿಬ್ಬರೂ ಮಾಡಿದಾಗ ಮಾತ್ರ ಗೃಹಕೃತ್ಯಗಳಿಗೂ ಮನ್ನಣೆ ದೊರಕುತ್ತದೆ ಎಂಬ ಸಲಹೆಯನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ನೀಡುತ್ತಾರೆ. ಪುರುಷರನ್ನು 'ಉತ್ಪಾದಕ'ರೆಂದು ಪರಿಗಣಿಸಿ ಮಹಿಳೆಯನ್ನು 'ಬಳಕೆದಾರ'ರೆಂದು ಪರಿಗಣಿಸಲಾಗುತ್ತದೆ. ಪುರುಷ ತಮ್ಮ ದುಡಿಮೆಯ ಫಲದಿಂದ ಗಳಿಸಿದ ವೇತನವನ್ನು ಸ್ತ್ರೀಯರು ಖರ್ಚು ಮಾಡುತ್ತಾರೆ ಎಂಬ ಅರ್ಥಹೀನವಾದವನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಕಟುವಾಗಿ ಖಂಡಿಸುತ್ತಾರೆ. ದಲ್ಲಾ ಕೊಸ್ತ ಮತ್ತು ಸೆಲ್ಮಾ ಜೇಮ್ಸ್‌ರು ಮಹಿಳೆಯ ಮನೆಗೆಲಸಕ್ಕೆ ವೇತನವನ್ನು ನಿಗದಿಪಡಿಸಬೇಕೆಂಬ ಬೇಡಿಕೆಯನ್ನು ಸ್ತ್ರೀಯರು ಮುಂದಿಡಬೇಕೆಂದು ವಾದಿಸಿದರು. ಆದರೆ ಬಾರ್ಬರ ಬೆರ್ಗ್‌ಮನ್ನಳು ಈ ಬೇಡಿಕೆಯು ಮಹಿಳೆಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಬಹುದಾದ ಸಾಧ್ಯತೆಗಳ ಬಗೆಗೆ ಯೋಚಿಸಿದಳು. ಸ್ತ್ರೀಯರು ಮನೆಗೆಲಸಕ್ಕೆ ವೇತನವನ್ನು ಕೇಳಿದರೆ ಅದನ್ನು ಬಂಡವಾಳಶಾಹಿ ವ್ಯವಸ್ಥೆಯು ವ್ಯಾಪಾರ ವಸ್ತುವನ್ನಾಗಿ ಪರಿವರ್ತಿಸುವ ಅಪಾಯವಿದೆ. ಇದು ಮಹಿಳೆಯನ್ನು ಮತ್ತಷ್ಟು ಶೋಷಣೆಗೆ

ಗುರಿಮಾಡುವಂತಹದು ಎಂಬ ತೀರ್ಮಾನ ಬಾರ್ಬರ ಬೆರ್ಗ್‌ಮನ್ನಳದು. ಆದರೆ ಮನೆಗೆಲಸದ ಮಹತ್ವವನ್ನೇನೂ ಆಕೆ ಅಲ್ಲಗಳೆಯಲಿಲ್ಲ.

ವರ್ಗದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆ ಕೊನೆಗಂಡರೂ ಸ್ತ್ರೀಶೋಷಣೆ ಕೊನೆಗಾಣುವುದಿಲ್ಲ. ಏಕೆಂದರೆ ಪ್ರತಿ ವರ್ಗದಲ್ಲೂ ಪುರುಷರಿಗಿಂತ ಸ್ತ್ರೀಯರು ಹೆಚ್ಚು ಶೋಷಿತರು. ಇಷ್ಟೇ ಅಲ್ಲ, ಸಾಮಾಜಿಕ ಶ್ರೇಣಿ ವ್ಯವಸ್ಥೆಯಲ್ಲಿ ಅನುಕೂಲಗಳನ್ನು ಪಡೆದಿರುವ ಸ್ತ್ರೀಯರು ಅನುಕೂಲಗಳಿಂದ ವಂಚಿತರಾದ ಸ್ತ್ರೀಯರನ್ನೂ ಶೋಷಿಸಬಹುದು. ಸ್ತ್ರೀ ಶೋಷಣೆಯ ಮೂಲಗಳು ಆರ್ಥಿಕೇತರವಾದ ವ್ಯವಸ್ಥೆಗಳಲ್ಲಿಯೂ ಅಡಕವಾಗಿದೆ. ಆದುದರಿಂದ ಕೇವಲ ಆರ್ಥಿಕ ವ್ಯವಸ್ಥೆಯ ಸುತ್ತ ಕೇಂದ್ರೀಕೃತವಾದ ಸ್ತ್ರೀವಾದಿ ಹೋರಾಟ ಸ್ತ್ರೀ ಶೋಷಣೆಯ ಮೂಲಗಳನ್ನು ಬುಡಸಮೇತ ಕಿತ್ತೊಗೆಯಲು ಸಾಧ್ಯವಿಲ್ಲ ಎಂಬುದು ಮಾರ್ಕ್ಸ್‌ವಾದಿ ಸ್ತ್ರೀವಾದದ ಬಗ್ಗೆ ಇರುವ ಪ್ರಮುಖ ಟೀಕೆಯಾಗಿದೆ.

**3.ತೀವ್ರಗಾಮಿ ಸ್ತ್ರೀವಾದ (Radical Feminism):**

ಅರವತ್ತರ ದಶಕದ ಕೊನೆಯಲ್ಲಿ ಬಂದ ಸ್ತ್ರೀವಾದದ ಎರಡನೇ ಅಲೆಯ ಜೊತೆ ಮತ್ತು ಪಶ್ಚಿಮದಲ್ಲಿ ಹುಟ್ಟಿಕೊಂಡ ಹೊಸ ಮಹಿಳಾ ವಿಮೋಚನಾ ಚಳುವಳಿಯೊಂದಿಗೆ ತೀವ್ರಗಾಮಿ ಸ್ತ್ರೀವಾದ ಉಗಮವಾಯಿತು. ಸ್ತ್ರೀವಾದದ ವಿಕಾಸದ ಇತಿಹಾಸದಲ್ಲಿ 'ತೀವ್ರಗಾಮಿ' ಸ್ತ್ರೀವಾದ ಒಂದು ಪ್ರಮುಖ ಘಟ್ಟವೂ ಹೌದು, ಕ್ರಾಂತಿಕಾರಕ ಘಟ್ಟವೂ ಹೌದು. ಜೀವಶಾಸ್ತ್ರೀಯ ಭಿನ್ನತೆಯಿಂದಲೆ ಮಹಿಳೆಯು ಪುರುಷನ ಅಧೀನಳಾಗಿದ್ದಾಳೆ ಎಂಬುದು, ಮೈನೆರೆಯುವುದು, ಮುಟ್ಟಾಗುವುದು, ಲೈಂಗಿಕ ಅಪೇಕ್ಷೆ, ಗರ್ಭಧಾರಣೆ, ಹೆರಿಗೆ, ಸ್ತನ್ಯಪಾನ, ಮುಟ್ಟು ನಿಲ್ಲುವುದು ಇತ್ಯಾದಿಗಳು ಹೆಣ್ಣಿಗೆ ಮಾತ್ರವೇ ವಿಶೇಷವಾದ ಜೀವಶಾಸ್ತ್ರೀಯ ಪ್ರಕ್ರಿಯೆಗಳು. ಈ ಕಾರಣಗಳಿಂದಲೇ ಹೆಣ್ಣು ಪುರುಷನ ಅವಲಂಬಿಯಾಗಿದ್ದಾಳೆ. ಆದರೆ ಹೆಣ್ಣಿನ ಮೌಲ್ಯವನ್ನು ಎತ್ತಿ ಹಿಡಿಯುವ ಪ್ರಬಲ ಶಕ್ತಿಗಳಿವು ಎಂಬುದನ್ನು ತಿಳಿಸಿದ್ದು ತೀವ್ರಗಾಮಿಗಳ ಕೊಡುಗೆ. ಲೈಂಗಿಕ ದಾಸ್ಯ ಮತ್ತು ಒತ್ತಾಯದ ತಾಯ್ತನಗಳ ತಾಣ ಕುಟುಂಬ ವ್ಯವಸ್ಥೆ, ಅದೇ ಹೆಣ್ಣಿನ ಶೋಷಣೆಯ ಕೀಲಿಕೈ ಎಂಬುದು ತೀವ್ರಗಾಮಿಗಳವಾದ. ಇದರಿಂದ ಹೆಣ್ಣು ಕುಟುಂಬದ ಒಳಗೆ ಉಳಿಯುವಳಲ್ಲದೆ ಲಿಂಗಾಧಾರಿತ ಶ್ರಮವಿಭಜನೆಯನ್ನು ಪ್ರಶ್ನಿಸದೆ ಒಪ್ಪಿ ನಡೆಯುವ ಅನಿವಾರ್ಯತೆಯಿಂದ ಬದುಕುತ್ತಾಳೆ. ಸ್ತ್ರೀ ಶೋಷಣೆಯ ಕೇಂದ್ರವೇ ಕುಟುಂಬ ಎಂದು ತೀವ್ರಗಾಮಿಗಳು ಹೇಳುತ್ತಾರೆ. ಸ್ತ್ರೀ–ಪುರುಷ ಅಸಮಾನತೆಯ ಮೂಲವಾದ ಭಿನ್ನ ಜೈವಿಕತೆಯ ತತ್ವವನ್ನು ಇವರು ತೀವ್ರವಾಗಿ ನಿರಾಕರಿಸುತ್ತಾರೆ. ಈ ನಿರಾಕರಣೆಯ ಸಂಕೇತವಾಗಿ 1968ರಲ್ಲಿ ಒಳಉಡುಪುಗಳನ್ನು ಸುಟ್ಟು ಪ್ರದರ್ಶನವನ್ನು ಇವರು ಮಾಡಿದರು. ವಿಭಿನ್ನ ದೇಹ ರಚನೆ ಹೊಂದಿದ ಕಾರಣ ಸ್ತ್ರೀ–ಪುರುಷರ ಕಾರ್ಯಗಳು ಗುಣ ಸ್ವಭಾವಗಳು ಭಿನ್ನವಾಗಿದ್ದು, ಸಮಾಜದ ಒಳತಿನ ದೃಷ್ಟಿಯಿಂದ ಅದನ್ನು ಉಳಿಸಿ ಮುಂದುವರೆಸಿಕೊಂಡು ಬರಬೇಕೆಂಬ ವಾದವನ್ನು ಇವರು ಸಾರಾಸಗಟಾಗಿ ನಿರಾಕರಿಸುತ್ತಾರೆ.

ಸ್ತ್ರೀಯರನ್ನು ಮೂಲಭೂತವಾಗಿ ಮಕ್ಕಳನ್ನು ಹೊರುವ, ಹೆರುವ ಹಾಗೂ ಪೋಷಿಸುವ ಯಂತ್ರದಂತೆ ಕಾಣುವುದೇ ಆಕೆಯ ಶೋಷಣೆಗೆ ಮೂಲ ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯ ಜೈವಿಕ ಕ್ರಿಯೆಗಳನ್ನು ಪುರುಷರು ತಮ್ಮ ಹತೋಟಿಯಲ್ಲಿರಿಸಿಕೊಂಡು ಆಕೆಯನ್ನು ನಿಯಂತ್ರಿಸುತ್ತಿದ್ದಾರೆ. ಅವಳ ವ್ಯಕ್ತಿತ್ವದ ಸಹಜ ವಿಕಸನಕ್ಕೆ ಅಡ್ಡಿಯನ್ನುಂಟು ಮಾಡುತ್ತಿದ್ದಾರೆ. ಸ್ತ್ರೀ ಸಮಾನತೆಯನ್ನು ಸ್ಥಾಪಿಸಬೇಕಾದರೆ ಸ್ತ್ರೀಯ ಜೈವಿಕ ಕ್ರಿಯೆಗಳ ಮೇಲೆ ಪುರುಷರು ಹೊಂದಿರುವ ಸ್ವಾಮ್ಯವನ್ನು ಕಿತ್ತೊಗೆಯಬೇಕು ಎಂದು ಹೇಳುತ್ತಾರೆ. ಶೂಲಮಿಥ್ ಫೈರ್‌ಸ್ಟೋನ್ನಳ 'ದಿ ಡೈಲೆಕ್ಟಿಕ್ ಆಫ್ ಸೆಕ್ಸ್' (1970) ಎಂಬ ಗ್ರಂಥ ಜೈವಿಕ ತಾಯ್ತನ (Biological motherhood) ಕ್ಕೆ ಸಮಾಜ ನೀಡಿರುವ ಅತಿಯಾದ ಪ್ರಾಶಸ್ತ್ಯವೇ ಸ್ತ್ರೀಯ

ಅಭಿವೃದ್ಧಿಗೆ ಮಾರಕ, ಶಿಶುವಿಗೆ ಜನನ ನೀಡುವುದರಲ್ಲೇ ಹೆಣ್ಣು ಜೀವನದ ಸಾರ್ಥಕತೆ ಅಡಗಿದೆ ಎಂಬ ಒಂದು ಮಿಥ್ಯೆಯ ಜಾಲದಲ್ಲಿ ಸ್ತ್ರೀಯನ್ನು ಬಂಧಿಸಿರುವ ಈ ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆ ತಾಯ್ತನದ ಹೆಸರಿನಲ್ಲಿ ಸ್ತ್ರೀಯ ವ್ಯಕ್ತಿತ್ವವನ್ನು ದಮನ ಮಾಡುತ್ತಿದೆ ಎನ್ನುವ ಫೈರ್‌ಸ್ಟೋನ್ 'ಬಸಿರು, 'ಶಿಶುಜನನನ' ಮುಂತಾದ ಪರಿಕಲ್ಪನೆಗಳನ್ನೇ ಧಿಕ್ಕರಿಸುತ್ತಾಳೆ. ಜೈವಿಕ ತಾಯ್ತನವನ್ನು ತಿರಸ್ಕರಿಸಿ ಅಥವಾ ಧಿಕ್ಕರಿಸಿ ಕೃತಕ ವಿಧಾನಗಳನ್ನು ಅಳವಡಿಸಿ ಸ್ತ್ರೀ ಪುರುಷರು ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಪಾಲ್ಗೊಂಡಾಗ ಜೈವಿಕ ಸಂತಾನೋತ್ಪತ್ತಿ ಹೆಸರಿನಲ್ಲಿ ನಡೆಯುತ್ತಿರುವ ಸ್ತ್ರೀಯ ದಮನ ನಿಲ್ಲುತ್ತದೆ ಎಂಬುದು ಫೈರ್‌ಸ್ಟೋನ್‌ವಾದ. ಆನ್ ಓಕ್ಲೆ ತನ್ನ ವುಮನ್ಸ್ ವರ್ಕ್, ದಿ ಹೌಸ್ ವೈಫ್, ಪಾಸ್ಟ್ ಅಂಡ್ ಪ್ರೆಸೆಂಟ್ (1974) ಎಂಬ ಗ್ರಂಥದಲ್ಲಿ ತಾಯ್ತನಕ್ಕೆ ಸಂಬಂಧಿಸಿದ ಹಲವಾರು ಹುಸಿಕಲ್ಪನೆಗಳನ್ನು ಪ್ರಶ್ನಿಸಿದ್ದಾಳೆ. ಸ್ತ್ರೀಯ ಸಹಜ ಪ್ರತಿಭೆಯನ್ನು ತಾಯ್ತನವೆಂಬ ಗೋರಿಯಲ್ಲಿ ಸಮಾಧಿ ಮಾಡಲು ಹೇಸದ ಪುರುಷಪ್ರಧಾನ ಸಮಾಜ ಓರ್ವ ಪುರುಷನನ್ನು ಕುರಿತು ಭಿನ್ನವಾದಂತಹ ಧೋರಣೆಗಳನ್ನು ತಳೆಯುತ್ತದೆ. ಸಮಾಜದ ಈ ದ್ವಿಮುಖ ಮೌಲ್ಯ ವ್ಯವಸ್ಥೆಯಿಂದ ಹೊರಬರಬೇಕಾದರೆ ಸ್ತ್ರೀ ಈ ಬಲ್ಕಾತಾರದ ತಾಯ್ತನವನ್ನು ತಿರಸ್ಕರಿಸಿ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಲೇಬೇಕು. ತಾಯ್ತನವನ್ನು ತಿರಸ್ಕರಿಸುವ ಸ್ತ್ರೀಯರು ಅಪರಾಧಿ ಭಾವನೆಯಿಂದ ನರಳಬೇಕಾಗಿಲ್ಲ ಏಕೆಂದರೆ ತಾಯ್ತನ ಎನ್ನುವುದು ಒಂದು ಸಾಂಸ್ಕೃತಿಕ ಕಟ್ಟುಕಥನವೇ ಹೊರತು ಎಲ್ಲ ಸ್ತ್ರೀಯರಿಗೂ ಸಹಜವಾಗಿ ಒದಗಿಬರುವಂಥ ಗುಣವಲ್ಲ. ಸ್ತ್ರೀ ತಾನು ಜನ್ಮ ಎತ್ತ ಮಕ್ಕಳನ್ನು ಸ್ತ್ರೀವಾದಿ ಮೌಲ್ಯಗಳನ್ನು ಆಧರಿಸಿದ ಸಾಮಾಜೀಕರಣ ಪ್ರಕ್ರಿಯೆಗೆ ಒಳಪಡಿಸಬೇಕು ಎಂಬುದು ರಿಚನ್ ವಿಚಾರವಾಗಿತ್ತು. ತೀವ್ರಗಾಮಿ ಸ್ತ್ರೀವಾದಿಗಳು ಸ್ತ್ರೀ ಪುರುಷ ಅಸಮಾನತೆಯ ಸಾಮಾಜಿಕ ಮೂಲಗಳನ್ನು ಶೋಧಿಸಲೂ ಪ್ರಯತ್ನಗಳನ್ನು ಮಾಡಿದ್ದಾರೆ. ಪುರುಷತ್ವ ಎನ್ನುವುದು ಒಂದು ಆದರ್ಶ ಮಾದರಿ, ಸ್ತ್ರೀತ್ವ ಎನ್ನುವುದು ಒಂದು ನಕಾರಾತ್ಮಕವಾದ ಗುಣ ಎನ್ನುವ ಭಾವನೆ ಮೂಡಿ ಬರಬೇಕಾದರೆ ಸ್ತ್ರೀತ್ವಕ್ಕೆ ಸಮಾಜ ನೀಡಿರುವ ಎರಡನೆ ದರ್ಜೆಯ ಸ್ಥಾನವೇ ಕಾರಣ. ಸ್ತ್ರೀಯಲ್ಲಿ ಕ್ರಾಂತಿಕಾರಿ ಮನೋಭಾವ ಬೆಳೆಯಬೇಕು, ಸ್ತ್ರೀ ತನ್ನನ್ನು ಸುತ್ತುವರೆದಿರುವ ಹುಸಿ ಕಲ್ಪನೆಗಳನ್ನು ಕಿತ್ತೊಗೆಯಬೇಕು, ಪ್ರತಿಯೋರ್ವ ಸ್ತ್ರೀಗೂ ಲೈಂಗಿಕ ಸ್ವಾತಂತ್ರ್ಯವಿರಬೇಕೆಂಬುದು ಇತ್ತೀಚಿನ ತೀವ್ರಗಾಮಿ ಸ್ತ್ರೀವಾದದ ಹಲವು ಪ್ರಮುಖ ವಿಚಾರಗಳು. ಸ್ತ್ರೀತ್ವವನ್ನು ಮೆರೆಸುವಂತಹ ಈ ತೀವ್ರಗಾಮಿ ಸ್ತ್ರೀವಾದವು ಲಿಂಗತಾರತಮ್ಯವನ್ನು ಕೊನೆಗಾಣಿಸುವುದಕ್ಕಿಂತ ಅದನ್ನು ಉಳಿಸಿಕೊಂಡು ಬರುವುದಕ್ಕೆ ಹೆಚ್ಚು ಒತ್ತು ನೀಡುತ್ತದೆ ಎಂಬ ಟೀಕೆಗೆ ಗುರಿಯಾಗಿದೆ.

### 4.ಮನೋವಿಶ್ಲೇಷಣಾತ್ಮಕಸ್ತ್ರೀವಾದ (Psychoanalytical Feminism):

ಮನೋವಿಶ್ಲೇಷಣಾತ್ಮಕ ಸ್ತ್ರೀವಾದದ ಸಿದ್ಧಾಂತವು ಲೈಂಗಿಕತೆಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಹೆಣೆದಿರುವ ಒಂದು ಸ್ತ್ರೀವಾದಿ ಧೋರಣೆಯಾಗಿದೆ. ಫ್ರಾಯ್ಡನ್ ಮನೋವಿಶ್ಲೇಷಣಾತ್ಮಕ ಸಿದ್ಧಾಂತದ ಮೂಲ ಕಲ್ಪನೆಗಳೇ ಈ ಸಿದ್ಧಾಂತಕ್ಕೆ ಒಂದು ಸೈದ್ಧಾಂತಿಕ ನೆಲೆಯನ್ನು ಒದಗಿಸಿವೆ ಎನ್ನಬಹುದು. ಲಿಂಗ ವ್ಯವಸ್ಥೆ ಎನ್ನುವುದು ಲೈಂಗಿಕ ಪಕ್ವತೆಯ (Maturation) ಒಂದು ಸೃಷ್ಟಿ. ವಿಭಿನ್ನವಾದ ಲೈಂಗಿಕ ಅನುಭವಗಳಿಗೆ ಒಳಪಡುವ ಬಾಲಕ–ಬಾಲಕಿಯರು ವಿಭಿನ್ನವಾದ ಲಿಂಗ ಪಾತ್ರಗಳನ್ನು ಸ್ವೀಕರಿಸುತ್ತಾರೆ ಎಂಬುದು ಫ್ರಾಯ್ಡನ ವಿಶ್ಲೇಷಣೆಯಾಗಿತ್ತು. ಪುರುಷ ಪ್ರಧಾನ್ಯ ಅಥವಾ ಸ್ತ್ರೀಯ ಪರಾಧೀನತೆಗಳೆರಡೂ ಸಮಾಜದ ರಚನೆಗಳೇ ಹೊರತು ಸ್ತ್ರೀಯ ಜೈವಿಕತೆಗೆ ಸಂಬಂಧಿಸಿದವಲ್ಲ. ಆದುದ್ದರಿಂದ ಫ್ರಾಯ್ಡನ ವಿಚಾರಧಾರೆಯೇ ಅಸಂಗತ ಎಂಬ ವಿಚಾರವನ್ನು

ಬೆಟ್ಟಿ ಫ್ರೀಡನ್, ಶೂಲಮಿಥ್ ಫೈರ್‌ಸ್ಟೋನ್ ಅಥವಾ ಕೇಟ್‌ಮಿಲೆಟ್ ಅವರ ವಿಮರ್ಶೆಗಳಲ್ಲಿ ನಾವು ಕಾಣಬಹುದು. ಫ್ರಾಯ್ಡನ್ ಪ್ರಕಾರ ಶಾರೀರಿಕ ಪಕ್ವತೆ ಬಂದಂತೆಲ್ಲ ಹೆಣ್ಣು ಮಗುವು ಮಾನಸಿಕವಾಗಿ ತಾನು ಅಬಲೆ, ಕೀಳು ಎಂಬ ಕೀಳರಿಮೆಯ ಭಾವಕ್ಕೆ ಪಕ್ಕಾಗುತ್ತದೆ. ಪುರುಷಶಿಶ್ನವು ತನಗಿಲ್ಲವೆಂಬುದೇ ಈ ಕೀಳರಿಮೆಗೆ ಕಾರಣವಾಗಿ ಅದು ಶಿಶ್ನ–ದ್ವೇಷದಲ್ಲಿ ಪರ್ಯವಸಾನವಾಗುತ್ತದೆ. ಈತ ಕಟ್ಟಿಕೊಡುವ ಹೆಣ್ಣಿನ ಮಾನಸಿಕ ರಚನೆಯ ಈ ಮಾದರಿಯು, ಗಂಡಿನ ಮಾನಸಿಕ ಪ್ರಕ್ರಿಯೆಯ ನೇತ್ಯಾತ್ಮಕ ಮಾದರಿ ಎಂದು ಸ್ತ್ರೀವಾದಿಗಳೂ ಭಾವಿಸಿದರು. ಈ ಸಂಬಂಧವಾಗಿ 'Sexual Politics' ಕೃತಿಯಲ್ಲಿ ಕೇಟ್ ಮಿಲೆಟ್‌ಳು ಫ್ರಾಯ್ಡನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಆಡ್ಲೆರ್ (1927), ಹಾರ್ನಿ (1973) ಮತ್ತು ಥಾಂಮ್ಸನ್ (1964) ಅವರು ಸ್ತ್ರೀಯ ವ್ಯಕ್ತಿತ್ವದ ವಿಕಸದಲ್ಲಿ ಜೈವಿಕತೆಯ ಪಾತ್ರವನ್ನು ಕುರಿತು ಫ್ರಾಯ್ಡನ ವಿಚಾರಗಳನ್ನು ತಿರಸ್ಕರಿಸಿ ಲಿಂಗ ವ್ಯವಸ್ಥೆಯನ್ನು ರೂಪಿಸುವ ಅಂಶಗಳಲ್ಲಿ ವ್ಯಕ್ತಿಯ ಅನುಭವಗಳು ಮತ್ತು ಸಾಂಸ್ಕೃತಿಕ ಪ್ರಭಾವಗಳು ಅತ್ಯಂತ ಪ್ರಮುಖವಾದವು ಎಂಬ ನಿಲುವನ್ನು ತಿಳಿದಿದ್ದರು.

ಡಿನ್ನರ್‌ಸ್ಟೈನ್ (1977) ಮತ್ತು ಛೋಡೊರಾವ್ (1974) ತಾಯ್ತನದ ಸಂಪೂರ್ಣ ಜವಬ್ದಾರಿಯನ್ನು ಸ್ತ್ರೀಯರು ಮಾತ್ರವೇ ಹೊತ್ತಿರುವುದರಿಂದಲೇ ಸ್ತ್ರೀ ಮತ್ತು ಪುರುಷರ ನಡುವಣ ಭೇದಭಾವಗಳು ಸೃಷ್ಟಿಯಾಗುವುದು. ಸ್ತ್ರೀ ಪುರುಷಬ್ಬರೂ ಮಕ್ಕಳ ಪಾಲನೆ–ಪೋಷಣೆಯ ಜವಾಬ್ದಾರಿಗಳನ್ನು ಹಂಚಿಕೊಂಡಾಗ 'ಪುರಷಸಹಜ' 'ಸ್ತ್ರೀಸಹಜ' ಎಂದು ಗುರುತಿಸಲಾಗುತ್ತಿರುವ ಗುಣಗಳಿಗೆ ಯಾವ ಪ್ರಾಶಸ್ತ್ಯವೂ ಇರುವುದಿಲ್ಲ. ಪುರುಷರು ಸಹ ಮಕ್ಕಳ ಪೋಷಣೆಯಲ್ಲಿ ಪಾಲ್ಗೊಂಡಾಗ ಮಾತ್ರ ಮಾತೃತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಪುರುಷರಲ್ಲಿ ಅರಿವು ಮೂಡಲು ಸಾಧ್ಯ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಕ್ಯಾರೊಲ್ ಗಿಲಿಗನ್ (1982) ನೈತಿಕತೆಯನ್ನು ಕುರಿತಂತೆ ಫ್ರಾಯ್ಡನ ನಿಲುವುಗಳನ್ನು ಪ್ರಶ್ನಿಸಿ ಸ್ತ್ರೀಯರಿಗಿಂತ ಪುರುಷರಿಗೆ ಹೆಚ್ಚಿನ ಮಟ್ಟದ ನೈತಿಕತೆ ಅಥವಾ ನ್ಯಾಯ ಪ್ರಜ್ಞೆ ಇರುತ್ತದೆಂಬ ವಾದವನ್ನು ತಿರಸ್ಕರಿಸುತ್ತಾಳೆ. ಸ್ತ್ರೀ ಶೋಷಣೆಯ ಮೂಲವನ್ನು ಆಕೆಯ ಜೈವಿಕತೆಯ ಸುತ್ತ–ಮುತ್ತ ಮಾತ್ರ ಹುಡುಕುವ ದೃಷ್ಟಿಕೋನ ಅಪೂರ್ಣವಾದ್ದದು ಏಕೆಂದರೆ ಲಿಂಗತಾರತಮ್ಯಕ್ಕೆ ಸಾಮಾಜಿಕ–ಆರ್ಥಿಕ–ರಾಜಕೀಯ ಅಂಶಗಳು ಕಾರಣಗಳಿವೆ ಎಂಬುದು ಈ ಸಿದ್ಧಾಂತಕ್ಕಿರುವ ಟೀಕೆ.

**5.ಅಸ್ತಿತ್ವವಾದಿ ಸ್ತ್ರೀವಾದ (Existentialist Feminism):**

ಫ್ರೆಂಚ್ ಚಿಂತಕಿ ಸಿಮೋನ್ ದ ಬೋವಾ ರಚಿಸಿದ ದಿ ಸೆಕೆಂಡ್ ಸೆಕ್ಸ್ (1974) ನಲ್ಲಿ ಅಸ್ತಿತ್ವವಾದಿ ಸ್ತ್ರೀವಾದದ ಪ್ರಮುಖ ಅಂಶಗಳ ಪರಿಚಯ ನಮಗೆ ಉಂಟಾಗುತ್ತದೆ. ಸ್ತ್ರೀಶೋಷಣೆಯ ಮೂಲ ಅಡಗಿರುವುದು ಆಕೆ ಪುರುಷನಿಗಿಂತ 'ಭಿನ್ನವಾದವಳು' ಎಂಬ ಕಾರಣಕ್ಕಾಗಿ. ಮಾನವ ಸಮಾಜದ ಉಗಮಕಾಲದಿಂದಲೂ ಪುರುಷ ತನ್ನನ್ನ 'ತಾನು' (self) ಎಂದು ಗುರುತಿಸಿಕೊಂಡರೆ ಸ್ತ್ರೀಯನ್ನು 'ಪರ' ಅಥವಾ 'ಅನ್ಯ' (other) ಎಂದು ಪರಿಗಣಿಸಿದ್ದಾನೆ. 'ತಾನು' ಹಾಗೂ 'ಪರ' ಎನ್ನುವ ಎರಡು ಭಾವನೆಗಳು ಯಾವಾಗಲೂ ಪರಸ್ಪರ ವಿರೋಧಿಗಳಾಗಿರುವುದರಿಂದ ತನ್ನತನವನ್ನು ಉಳಿಸಿಕೊಳ್ಳಲಿಚ್ಚಿಸುವ ಪುರುಷ ತಾನು 'ಪರ' ಎಂದು ಪರಿಗಣಿಸುವ ಸ್ತ್ರೀಯನ್ನು ಪರಾಧೀನಳನ್ನಾಗಿ ಪರಿವರ್ತಿಸಿದ್ದಾನೆ. 'ಸ್ತ್ರೀ' ಮತ್ತು 'ಪುರುಷ'ನಿಗೆ ಇರುವ ಭಿನ್ನ ಅಸ್ತಿತ್ವಗಳೇ, ಎಂದರೆ, 'ಸ್ತ್ರೀದೇಹ' ಅಥವಾ 'ಪುರುಷದೇಹ' ಹಾಗೂ ಈ ದೈಹಿಕ ಸ್ಥಿತಿಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಕಂಡುಬರುವ ಭಿನ್ನತೆ–ಇವುಗಳೇ ಸ್ತ್ರೀಪುರಷ ಅಸಮಾನತೆಗೆ ಮೂಲಕಾರಣ ಎಂಬುದು ಬೋವಾಳ ಪ್ರಮುಖ ವಿಚಾರವಾಗಿತ್ತು. ಎಲ್ಲಿಯವರೆಗೆ 'ತಾನು' ಹಾಗೂ 'ಪರ' ಎಂಬ ಭಾವನೆಗಳು ಲಿಂಗ ಸಂಬಂಧಗಳನ್ನು ರೂಪಿಸುತ್ತವೆಯೋ ಅಲ್ಲಿಯವರೆಗೆ

ಲಿಂಗಭೇದಕ್ಕೆ ಕೊನೆಯಿಲ್ಲ. ಸಮಾಜದ ಆರ್ಥಿಕ ಸ್ವರೂಪವೇನೇ ಆಗಿರಲಿ ಸ್ತ್ರೀ ಪುರುಷರ ಸಂಬಂಧಗಳ ಸ್ವರೂಪದಲ್ಲಿ ಗಮನಾರ್ಹವಾದ ಬದಲಾವಣೆಗಳೇನೂ ಕಂಡುಬರುವುದಿಲ್ಲ ಎಂಬುದು ಬೋವಾಳ ಅಭಿಪ್ರಾಯ. **'ಪತ್ನಿತ್ವ'** ಮತ್ತು **'**ತಾಯ್ತನ'ಗಳೇ ಸ್ತ್ರೀಯ ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಾಡುವ ಪ್ರಮುಖ ಅಂಶಗಳೆಂಬುದು ಬೋವಾಳ ಖಚಿತ ನಿಲುವು. ಸ್ತ್ರೀ ಉದ್ಯೋಗಸ್ಥಳಾಗುವುದರಿಂದ ಅವಳಿಗೆ ಹೊಸ–ಹೊಸ ಅವಕಾಶಗಳು ಮೂಡಿ ಬರುತ್ತವೆ. ಸ್ತ್ರೀಯರು ಉದ್ಯೋಗಸ್ಥರಾಗುವುದರ ಜೊತೆ–ಜೊತೆಗೆ ಬುದ್ದಿ ಜೀವಿಗಳೂ ಆಗಬೇಕು. ಸ್ತ್ರೀಗೆ ಅಂಟಿರುವ ಅಸ್ತಿತ್ವದಿಂದ ಆಕೆ ಹೊರಬಂದು ತನ್ನತನವನ್ನು ಬೆಳೆಸಿಕೊಳ್ಳಬೇಕಾದರೆ ಅದಕ್ಕೆ ಪೂರಕವಾದ ಸಾಮಾಜಿಕ ಪರಿಸರವನ್ನು ಸೃಷ್ಟಿಸುವುದು, ಅರ್ಥಿಕ ಸ್ವಾತಂತ್ರ್ಯ ಅವಶ್ಯಕತೆ ಇದೆ ಎಂಬುದು ಬೋವಾ ಅಭಿಪ್ರಾಯ. **'**ಪುರುಷ ದೇಹ**'**, **'**ಪುರುಷತ್ವ**'** ಮುಂತಾದ ಕಲ್ಪನೆಗಳಿಗೆ ಅತಿಯಾದ ಮಹತ್ವವನ್ನು ನೀಡಿರುವ ಬೋವಾಳ ಸ್ತ್ರೀವಾದಿ ಚಿಂತನೆ ಪುರುಷ ಸಂಕೇತವೆಂದು ಗುರುತಿಸಲಾದ ಮೌಲ್ಯಗಳನ್ನು ಮರೆಸುತ್ತಿದೆ ಎಂಬ ಟೀಕೆಗೂ ಗುರಿಯಾಗಿದೆ.

**6.ಸಮಾಜವಾದಿ ಸ್ತ್ರೀವಾದ (Socialist feminism):**

ಸಮಾಜವಾದಿ ಸ್ತ್ರೀವಾದವನ್ನು ಮಾರ್ಕ್ಸ್‌ವಾದಿ, ತೀವ್ರಗಾಮಿ, ಮನೋವಿಶ್ಲೇಷಣಾತ್ಮಕ ಸ್ತ್ರೀವಾದಗಳ ಒಂದು ಸಂಗಮ ಎಂದು ಹೇಳಬಹುದು. ಈ ಮೂರು ಸ್ತ್ರೀವಾದಿ ಧೋರಣೆಗಳಲ್ಲಿ ಅಡಕವಾಗಿರುವ ಪ್ರಮುಖ ತತ್ವಗಳನ್ನೂ, ಸಮಾಜವಾದಿ ಸ್ತ್ರೀವಾದಿಗಳು ತಮ್ಮ ವಿಶ್ಲೇಷಣೆಯಲ್ಲಿ ಬಳಸಿಕೊಂಡಿದ್ದರೂ ಯಾವುದೇ ಒಂದು ಅಂಶಕ್ಕೆ ಅವರು ವಿಶೇಷವಾದ ಒತ್ತನ್ನು ನೀಡಿರಲಿಲ್ಲ. ವರ್ಗಭೇದಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯೇ ಸ್ತ್ರೀಶೋಷಣೆಯ ಏಕೈಕ ಮೂಲವಲ್ಲ ಎನ್ನುವ ಸಮಾಜವಾದಿ ಸ್ತ್ರೀವಾದಿಗಳು, ಸ್ತ್ರೀಶೋಷಣೆ ವರ್ಗಾಂತರಗಳನ್ನು ಮೆಟ್ಟಿ ನಿಂತಂತಹ ಒಂದು ಪ್ರವೃತ್ತಿ ಎನ್ನುತ್ತಾರೆ. ಆಲಿಸನ್ ಜಾಗರ್, ಜೂಲಿಯಟ್ ಮಿಷೆಲ್, ಹಾಯಿಡಿ ಹಾರ್ಟ್‌ಮನ್ ಸಮಾಜವಾದಿ ಸ್ತ್ರೀವಾದದ ಪ್ರತಿಪಾದಕರಲ್ಲಿ ಪ್ರಮುಖರು. ಎಲ್ಲಾ ವಿವಿಧ ಸ್ತ್ರೀವಾದಿ ಪಂಥಗಳ ಚಿಂತಕರು ಸ್ತ್ರೀ ಶೋಷಣೆಯ ಮೂಲವನ್ನು, ಅದರಿಂದ ಹೊರಬರುವ ಮಾರ್ಗಗಳನ್ನು ಕುರಿತು ತಮ್ಮದೇಯಾದ ಬೇರೆ ಬೇರೆ ಮಾರ್ಗಗಳಲ್ಲಿ ಚಿಂತಿಸಿದ್ದಾರೆ. ಇವರ ಚಿಂತನೆಗಳಲ್ಲಿ ಏಕ ಮುಖೀ ದೃಷ್ಟಿಕೋನವಿರದೆ ಬಹುಮುಖೀ ನೆಲೆಗಳಿವೆ. ಒಟ್ಟು ಸಮಗ್ರ ಬದಲಾವಣೆಯಾಗದ ಹೊರತು ಹೆಣ್ಣಿನ ಬದುಕಿನಲ್ಲಿ, ಅವಳ ಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂಬ ಸತ್ಯವನ್ನು ಸಮಾಜವಾದಿ ಸ್ತ್ರೀವಾದಿಗಳು ಕಂಡುಕೊಂಡರು.

ಜೂಲಿಯೆಟ್ ಮಿಷೆಲ್ಲಳ ದಿ ವುಮನ್ಸ್ ಎಸ್ಟೇಟ್ (1971) ನಲ್ಲಿ ಉತ್ಪಾದನಾ ವ್ಯವಸ್ಥೆ, ಸಂತಾನೋತ್ಪತ್ತಿ ಮತ್ತು ಲೈಂಗಿಕತೆ, ಸಾಮಾಜಿಕರಣದ ಪ್ರಕ್ರಿಯೆ ಮುಂತಾದವುಗಳು ಲಿಂಗ ಅಸಮಾನತೆಗೆ ಕಾರಣವಾದವು ಎಂದು ಹೇಳುವುದರ ಜೊತೆಜೊತೆಗೆ ಸ್ತ್ರೀಯ ಮನಸ್ಸಿನಾಳದಲ್ಲಿ ಹುದುಗಿರುವ ಅಸಮಾನತಾ ಭಾವನೆ ಕೂಡ ಸ್ತ್ರೀಶೋಷಣೆಗೆ ಇಂಬುಕೊಡುತ್ತದೆ ಎನ್ನುವುದು ಮಿಷೆಲ್ಲಳ ಅಭಿಪ್ರಾಯ. ಉತ್ಪಾದನಾ ವ್ಯವಸ್ಥೆ ಮತ್ತು ಸಂತಾನೋತ್ಪತ್ತಿ ಈ ಎರಡು ಪ್ರಕ್ರಿಯೆಗಳಲ್ಲೂ ಸ್ತ್ರೀ ನಿರ್ವಹಿಸುವ ಪಾತ್ರ. ಮಕ್ಕಳನ್ನು ಸಾಮಾಜಿಕರಣಗೊಳಿಸುವಲ್ಲಿ ಆಕೆಗಿರುವ ಜವಾಬ್ದಾರಿ ಮತ್ತು ಲೈಂಗಿಕತೆ ಈ ಎಲ್ಲ ಅಂಶಗಳೂ ಸ್ತ್ರೀಯ ಸಾಮಾಜಿಕ ಸ್ಥಾನವನ್ನು ನಿರ್ಧರಿಸುವಂಥವು. ಈ ಅಂಶಗಳನ್ನು ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸಿ ನೋಡಿದಾಗ ಸ್ತ್ರೀಶೋಷಣೆಗೆ ಸಮರ್ಥವಾದ ವಿವರಣೆ ದೊರೆಯುವುದಿಲ್ಲ. ಆದುದರಿಂದಲೇ ಸ್ತ್ರೀ ಶೋಷಣೆಯ ಮೂಲಗಳನ್ನು ಹುಡುಕಲು ಒಂದು ಸಮಗ್ರ ದೃಷ್ಟಿಕೋನದ ಅಗತ್ಯವಿದೆ ಎಂಬುದು ಮಿಷೆಲ್ಲಳ ಅಭಿಪ್ರಾಯ. ಮಿಷೆಲ್ಲ ತನ್ನ ಸೈಕೋಅನಾಲಿಸಿಸ್ ಮತ್ತು ಫೆಮಿನಿಸಂ ನಲ್ಲಿ ಸ್ತ್ರೀ ಹಣವಂತಳೇ ಆಗಿರಲಿ, ಕಪ್ಪು ಮತ್ತು ಬಳಿಯವಳೇ

ಆಗಿರಲಿ, ಎಲ್ಲಿಯವರೆಗೆ ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯ ಹಿಡಿತದಲ್ಲಿ ಆಕೆಯು ಜೀವಿಸುತ್ತಾಳೋ ಅಲ್ಲಿಯವರೆಗೆ ಒಬ್ಬ ಸ್ತ್ರೀಯ ಪರಿಸ್ಥಿತಿಗಿಂತ ಮತ್ತೊಬ್ಬ ಸ್ತ್ರೀಯ ಪರಿಸ್ಥಿತಿ ಭಿನ್ನವಾಗಿರಲು ಸಾಧ್ಯವೇ ಇಲ್ಲ. ಸಂತಾನೋತ್ಪತ್ತಿಯ ಜವಾಬ್ದಾರಿಯನ್ನು ತಂತ್ರಜ್ಞಾನದ ನೆರವಿನಿಂದ ಸೃಷ್ಟಿಯಾದ ಕೃತಕ ವಿಧಾನಗಳಿಗೆ ಒಪ್ಪಿಸುವುದರಿಂದ ಸ್ತ್ರೀಯ ಮೂಲಭೂತ ಮಾನಸಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎನ್ನುತ್ತಾಳೆ. ಬಂಡವಾಳಶಾಹಿ ವ್ಯವಸ್ಥೆ ಜೊತೆ ಜೊತೆಗೆ ಪುರುಷ ಪ್ರಧಾನತೆಯ ನಿರ್ಮೂಲನವೂ ಆದಾಗ ಮಾತ್ರ ಸ್ತ್ರೀ ಪುರುಷ ಸಮಾನತೆಯನ್ನು ಆಧರಿಸಿದ ವ್ಯವಸ್ಥೆ ಅಸ್ತಿತ್ವಕ್ಕೆ ಬರಲು ಸಾಧ್ಯ ಎನ್ನುವ ಮಿಷೆಲ್ ಇಡೀ ಸಮಾಜವೇ ಪುರುಷಪ್ರಧಾನತೆಯ ಹಿಡಿತದಲ್ಲಿರುವುದರಿಂದ ಪುರುಷ ಪ್ರಧಾನತೆಯ ನಿರ್ಮೂಲನ ಎಂದರೆ ಸಮಾಜವನ್ನೇ ನಿರ್ಮೂಲನ ಮಾಡಿದಂತೆ ಎನ್ನುವ ಅಭಿಪ್ರಾಯವನ್ನು ಪ್ರತಿಪಾದಿಸುತ್ತಾಳೆ.

ಸಮಾಜವಾದಿ ಸ್ತ್ರೀವಾದಿ ಚಿಂತಕಿ ಹಾಯ್ಡಿ ಹಾರ್ಟ್‌ಮನ್ (1976) ಹೇಳುವಂತೆ ಮಾರ್ಕ್ಸ್‌ವಾದ ಸ್ತ್ರೀಪುರುಷ ಅಸಮಾನತೆಯ ನೈಜ ಸ್ವರೂಪವನ್ನು ವಿವರಿಸುವಲ್ಲಿ, ವಿಫಲವಾಗಿದೆ. ಸಮಾಜದ ಎಲ್ಲ ಸಂಸ್ಥೆಗಳಲ್ಲೂ ಸ್ತ್ರೀಯರು ಪುರುಷರಿಗಿಂತ ಕೆಳಮಟ್ಟದ ಸ್ಥಾನವನ್ನು ಪಡೆದಿದ್ದಾರೆ ಎನ್ನುವ ಹಾರ್ಟ್‌ಮನ್ ಈ ಸಂಗತಿಯನ್ನು ಕುರಿತಂತೆ ಉದ್ಭವಿಸುವ ಪ್ರಶ್ನೆಗಳಿಗೆ ಮಾರ್ಕ್ಸ್‌ವಾದಿ ಚಿಂತನೆ ಸಮರ್ಪವಾದ ಉತ್ತರಗಳನ್ನು ನೀಡಿಲ್ಲ ಎನ್ನುತ್ತಾಳೆ. ಪುರುಷಪ್ರಧಾನತೆ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳೆರಡೂ ಸ್ತ್ರೀಪರ ಹೋರಾಟದ ಶತ್ರುಗಳು, ಈ ಎರಡು ಶತ್ರುಗಳನ್ನು ಬೇರೆ ಬೇರೆಯಾದ ಆಯುಧಗಳಿಂದ ಎದುರಿಸಬೇಕಾಗಿದೆ ಎನ್ನುವ ವಾದವನ್ನು ಹಾರ್ಟ್‌ಮನ್ ಮಂಡಿಸುತ್ತಾಳೆ. ಯಾವ ರೀತಿಯಲ್ಲಿ ಒಬ್ಬ ಶ್ರಮಿಕನ ದೇಹ ಕೇವಲ ಶ್ರಮವನ್ನು ಹೊರಸೂಸುವ ಯಂತ್ರದಂತೆ ಪರಿಗಣಿಸಲ್ಪಡುತ್ತದೆಯೋ ಅದೇ ರೀತಿಯಲ್ಲಿ ಸ್ತ್ರೀಯು ಕೂಡ ಪುರುಷನ ಇಚ್ಛೆಗಳಿಗನುಸಾರವಾಗಿ ತನ್ನ ದೇಹವನ್ನು ಒತ್ತೆಯಿಡುವಂಥ ಪರಿಸ್ಥಿತಿಯನ್ನು ತಲುಪಿದ್ದಾಳೆ. ಸಂತಾನೋತ್ಪತ್ತಿ, ತಾಯ್ತನ, ಮಕ್ಕಳನ್ನು ಬೆಳೆಸುವುದು ಇವೆಲ್ಲವೋ ಕೂಡ ಆಲಿಸನ್ ಜ್ಯಾಗರಳ ದೃಷ್ಟಿಯಲ್ಲಿ ಸ್ತ್ರೀಯಲ್ಲಿ ಪರಕೀಯ ಪ್ರಜ್ಞೆಯನ್ನು ಮೂಡಿಸುವಂಥ ಪ್ರಕ್ರಿಯೆಗಳೇ ಆಗಿವೆ. ಸ್ತ್ರೀ ಶೋಷಣೆಯನ್ನು ಕೊನೆಗಾಣಿಸಲು ಮಾಡಬೇಕಾದ ಮೊದಲ ಯತ್ನವೆಂದರೆ ಆ ಶೋಷಣೆಗೆ ಕಾರಣವಾಗುವಂಥ ಎಲ್ಲ ಅಂಶಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು. ಸ್ತ್ರೀಶೋಷಣೆಯ ಮೂಲಗಳು ಸ್ತ್ರೀಯ ಮನಸ್ಸಿನಲ್ಲಿ, ಸಾಮಾಜಿಕ ಸಂಸ್ಥೆಗಳಲ್ಲಿ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಅಡಗಿವೆ. ಈ ಎಲ್ಲ ಮೂಲಗಳನ್ನು ಶೋಧಿಸಿ, ನಾಶಪಡಿಸುವ ಮೂಲಕ ಮಾತ್ರ ಸ್ತ್ರೀ ಶೋಷಣೆಯನ್ನು ಎದುರಿಸಲು ಸಾಧ್ಯ ಎನ್ನುವುದು ಜ್ಯಾಗರಳ ಅಭಿಪ್ರಾಯ.

### 7.ಆಧುನಿಕೋತ್ತರ ಸ್ತ್ರೀವಾದ (post modern feminism)

ಆಧುನಿಕೋತ್ತರ ಸ್ತ್ರೀವಾದದ ವಿಚಾರಧಾರೆ ನಾವು ಇದುವರೆಗೂ ಚರ್ಚಿಸಿದ ಸ್ತ್ರೀವಾದಿ ಚಿಂತನೆಗಳಿಗಿಂತ ಭಿನ್ನವೂ, ವಿಶಿಷ್ಟವೂ ಆಗಿದೆ ಯಾವುದೇ ಒಂದು ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟಿನ ಒಳಗೆ ಸ್ತ್ರೀಶೋಷಣೆ ಎಂಬ ವಿಷಯವನ್ನು ಬಂಧಿಸಿ ವಿಶ್ಲೇಷಿಸುವ ಪ್ರಯತ್ನವೇ ಸ್ತ್ರೀಯರ ಆಸಕ್ತಿಯನ್ನು ವಿರೋಧಿಸುವಂತ ಕ್ರಮ ಎಂಬ ಅಭಿಪ್ರಾಯ ಆಧುನಿಕೋತ್ತರ ಸ್ತ್ರೀವಾದಿಗಳ ಬರಹಗಳಲ್ಲಿ ಮೂಡಿಬರುತ್ತದೆ. 'ಸ್ತ್ರೀಯರು' (women) ಎನ್ನುವುದು ಒಂದು ಸಮರೂಪವಾದ ವರ್ಗವಲ್ಲವಾದ್ದರಿಂದ ಎಲ್ಲ ಸ್ತ್ರೀಯರನ್ನು ಕುರಿತಂತೆ ಒಂದೇ ಒಂದು ಸಮಗ್ರವಾದ ದೃಷ್ಟಿಕೋನ ರಚನೆಸಾಧ್ಯವಿಲ್ಲ. ಎಷ್ಟು ವಿಭಿನ್ನವಾದ ಗುಂಪುಗಳಿಗೆ ಸೇರಿದ ಸ್ತ್ರೀಯರು ಇರುತ್ತಾರೋ, ಅಷ್ಟೇ ವಿಭಿನ್ನ ವಿಚಾರಧಾರೆಗಳೂ ಇದ್ದರೆ ಒಳಿತು. ಯಾವುದೇ

ಬಗೆಯ ಸ್ಥಿತಿ ಸ್ಥಾಪಕತ್ವಕ್ಕೆ ಎಡೆಕೊಡದ ಸಮಗ್ರ ಸ್ತ್ರೀವಾದಿ ದೃಷ್ಟಿಕೋನ ಪುರುಷ ಪ್ರಧಾನತೆಯ ಸಂಕೇತ ಎಂಬುದು ಆಧುನಿಕೋತ್ತರ ಸ್ತ್ರೀವಾದಿಗಳ ಅಭಿಪ್ರಾಯವಾಗಿದೆ. ಝುಕ್ ಲಕಾನ್, ಝುಕ್‌ದೆರ್ರಿದ, ಏಲೇನ್ ಸಿಕ್ಸು, ಲೂಸ್ ಇರಿಗರೆ, ಝುಲಿಯ ಕ್ರಿಸ್ತೆವ ಪ್ರಮುಖ ಆಧುನಿಕೋತ್ತ ಸ್ತ್ರೀವಾದಿ ಸಿದ್ಧಾಂತದ ಚಿಂತಕರು.

**ಸಾರಾಂಶ**

ಒಟ್ಟಾರೆಯಾಗಿ ಹೇಳುವುದಾದರೆ ಮಹಿಳೆಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವರ ಬೇಡಿಕೆ ಆಸಕ್ತಿಗಳನ್ನು ಎತ್ತಿ ಹಿಡಿಯುವ ಮಹಿಳಾಪರ ಹೋರಾಟವೇ ಸ್ತ್ರೀವಾದ. ಮಹಿಳೆಯರ ಪರಾಧೀನತೆ ಹಾಗೂ ತುಳಿತಕ್ಕೆ ಸೈದ್ಧಾಂತಿಕ ಹಿನ್ನಲೆಯಲ್ಲಿ ಕಾರಣ ಹುಡುಕುವಲ್ಲಿ ಸ್ತ್ರೀವಾದಿ ಸಿದ್ಧಾಂತಗಳು ಹುಟ್ಟಿಕೊಂಡವು. ಸ್ತ್ರೀವಾದಿ ಸಿದ್ಧಾಂತವು ಮಹಿಳೆಯರ ಜೀವನವನ್ನು ರೂಪಿಸುವ ನಿರ್ದೇಶಿಸುವ ನಿಬಂಧನೆಗಳನ್ನು ವಿಶ್ಲೇಷಿಸಿ ಮಹಿಳೆಯೆಂದರೇನು ಎಂಬುದರ ಗ್ರಹಿಕೆಯನ್ನು ಪರಿಶೋಧಿಸುತ್ತದೆ. ಇದು ಸ್ತ್ರೀ ಪುರುಷರ ನಡುವಿನ ಅಸಮಾನತೆಯನ್ನು ಸ್ವಾಭಾವಿಕ ಮತ್ತು ಅನಿವಾರ್ಯವೆಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಬದಲಿಗೆ ಅದನ್ನು ಪ್ರಶ್ನಿಸಬೇಕೆಂದು ಹೇಳುತ್ತದೆ. ಪುರುಷ ಕೇಂದ್ರಿತ ಹಾಗೂ ಲಿಂಗ ಶ್ರೇಣೀಕೃತದಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವ ಸ್ತ್ರೀವಾದವು ಮಹಿಳೆಯರ ಕುರಿತು ಮಹಿಳೆಯರಿಗೋಸ್ಕರ ಜ್ಞಾನವನ್ನು ಸೃಷ್ಟಿಸುತ್ತದೆ. ಸ್ತ್ರೀವಾದ ಪುಸ್ತಕದ ಬದನೇಕಾಯಲ್ಲ. ಅದು ಬದುಕಿನ ಸಂದರ್ಭದಲ್ಲಿ ನಾನಾ ರೀತಿಯ ಅನುಭವಗಳಿಂದ ಕಟ್ಟಿಕೊಂಡ ದಟ್ಟಪ್ರಜ್ಞೆ, ಆದ್ದರಿಂದ ಅದು ಕೇವಲ ಸಿದ್ಧಾಂತವಲ್ಲ. ಅದಕ್ಕೆ ಅಧಿಕೃತತೆ ಬರಬೇಕಾದರೆ ಸೈದ್ಧಾಂತಿಕ ಚೌಕಟ್ಟಿನಿಂದ ಹೊರಬಂದು ಕ್ರಿಯಾಶೀಲವಾಗಬೇಕು. ಶೋಷಿತ ವರ್ಗದೊಡನೆ ನೇರವಾದ ಸಂಬಂಧ ಹೊಂದಿ ಅವರ ಸಮಸ್ಯೆ, ಅನುಭವಗಳನ್ನು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. ಅನೇಕ ಮಹನೀಯರು ಈ ನಿಟ್ಟಿನಲ್ಲಿ ಕಾರ್ಯಪ್ರವೃತರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಇಂದಿರಾ, ಆರ್. (1995). *ಸ್ತ್ರೀವಾದ ದಿಕ್ಸೂಚಿ.* ಸಮತ ಅಧಯನ ಕೇಂದ್ರ.
- ಹೆಮಲತಾ, ಹೆಚ್.ಎಂ. (2004). *ಮಹಿಳಾ ಅಧ್ಯಯನ.* ಭಾಗ–1, ಡಿ.ವಿ.ಕೆ.ಮೂರ್ತಿ.
- ಮಂಗಳಾ ಪ್ರಿಯದರ್ಶಿನಿ, ಡಿ., (2007). *ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ.* ಕನ್ನಡ ವಿಶ್ವವಿದ್ಯಾಲಯ.
- ಪ್ರೀತಿ ಶುಭಚಂದ್ರ. (2002). *ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸುಮಿತ್ರಾಬಾಯಿ,ಬಿ.ಎನ್., ಗಾಯಿತ್ರಿ, ಎನ್. (1995). *ಸ್ತ್ರೀವಾದಿ ಪ್ರವೇಶಿಕೆ.* ಕರ್ನಾಟಕ ಲೇಖಕಿಯರ ಸಂಘ.
- ವನಜ, ವೆಂ., ರಾಜೇಶ್ವರಿ, ಹೆಚ್.ಆರ್. (1989). *ಸ್ತ್ರೀವಾದ–ದಕ್ಷಿಣ ಏಷ್ಯಾದಲ್ಲಿ ಅದರ ಪ್ರಸಕ್ತತೆ.* ಸಮತಾವೇದಿಕೆ.
- Suguna, B. (2009). *Women's Movement.* Discovery Publishing House Pvt.Ltd.
- Samatha B.Deshmane. (2005). *Sociology of Women's Movement.* Chethana Book House.